# ಹಂಪಿ ಟೈಮ್ಸ್

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026





ಓದುಗರ ಬೆರಳ ತುದಿಗೆ ನಿಮ್ಮ ಬ್ರಾಂಡ್, ನಿಮ್ಮ ವ್ಯವಹಾರ, ಸೇವೆ/ವಿಶೇಷ ಕೊಡುಗೆಗಳನ್ನು ಹಂಪಿ ಟೈಮ್ಸ್ ಮೂಲಕ ಹೆಚ್ಚು ಓದುಗರಿಗೆ ತಲುಪಿಸಿ.

1,10,000+
Digital E-PAPER READERS

No.1 HAMPI TIMES LEADING VIJAYANAGARA District News Paper

Contact for Advertisements: 9448633038



ಸಂಪುಟ:02 • ಸಂಚಿಕೆ: 211 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 23.02.2025 • ಭಾನುವಾರ • ಪುಟ:04 • ಬೆಲೆ:2
Volume:02 • Issue: 211 • PRGI No:KARKAN/2023/88055 • VIJAYANAGARA • 23.02.2025 • Sunday • Page:04 • Rs:2


# ಕೊಟ್ಟೂರು ದೊರೆಯೇ ನಿನಗೆ ನೀನೇ ಸರಿಯೇ

## ಮೂಲ ನಕ್ಷತ್ರಕ್ಕೆ ಕಾಯ್ದ ರಥ । ಹರಳಯ್ಯನ ಮನೆಯಿಂದ ಗಿಣ್ಣ ನೈವೇದ್ಯ । ಕೊಟ್ಟೂರು ಕಡೆ ನಾಡಿನ ನಡೆ

## 3 ಲಕ್ಷಕ್ಕೂ ಹೆಚ್ಚು ಭಕ್ತರು ಭಾಗಿ । ಭಕ್ತರ ಹರ್ಷೋದ್ಗಾರದ ನಡುವೆ ಸಾಗಿದ 85 ಅಡಿ ಎತ್ತರದ ತೇರು



ಚಿತ್ರ: ರವಿ ಉಜ್ಜಿನಿ

■ **ಹಂಪಿ ಟೈಮ್ಸ್ ಕೊಟ್ಟೂರು**

ಅಸಂಖ್ಯಾತ ಭಕ್ತರ ಆರಾಧ್ಯ ದೈವ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ ರಥೋತ್ಸವ ಲಕ್ಷಾಂತರ ಭಕ್ತಸ್ತೋಮದ ನಡುವೆ ಶನಿವಾರ ಸಂಜೆ 5.56ಕ್ಕೆ ವಿಜೃಂಭಣೆಯಿಂದ ಜಯಘೋಷಣೆಗಳೊಂದಿಗೆ ಜರುಗಿತು.

ಸಾಮಾನ್ಯವಾಗಿ 5.5 ಅಥವಾ 15 ನಿಮಿಷದಲ್ಲಿ ಜರುಗಬೇಕಿದ್ದ ರಥೋತ್ಸವವು ಮಾಘ ಬಹುಳ ಮೂಲನಕ್ಷತ್ರವು ಈ ಬಾರಿ 5.50ಕ್ಕೆ ಕೂಡಿರುವ ನಿಮಿತ್ತ 5.56ಕ್ಕೆ ರಥ ಸಾಗಿತು.

ತಡವಾಗಿ ರಥ ಸಾಗಿದರೂ ಲಕ್ಷಾಂತರ ಜನರು ಒಕ್ಕೊರಲಿನಿಂದ ಕೊಟ್ಟೂರೇಶ್ವರ ಮಹಾರಾಜಕ್ಕೂ ಜೈ ಎಂಬ ಘೋಷಣೆ ಮುಗಿಲು ಮುಟ್ಟಿತು. ಪಾದಯಾತ್ರೆ ಬಂದ ಭಕ್ತರು ಶಾಂತತೆಯಿಂದಕಾಯ್ದು. ರಥೋತ್ಸವವನ್ನು ಕಣ್ತುಂಬಿಕೊಂಡು ಶಾಸ್ತ್ರೋಕ್ತವಾಗಿ ಶ್ರೀಸ್ವಾಮಿ ರಥ ಏರುವ ಏಣಿಗಿಗೆ ಪೂಜೆ ಸಲ್ಲಿಸಿ, ಬೃಹತ್ತಾದ ಏಣಿಯನ್ನು ಮೆರವಣಿಗೆ ಮೂಲಕ ದಲಿತ ಸಮುದಾಯದ ನೂರಾರು ಯುವಕರು ಗಚ್ಚಿನಮಠದಿಂದ ವಿಜೃಂಭಣೆಯಿಂದ ಹೊತ್ತೊಯ್ದು ರಥಕ್ಕೆ ನಿಲ್ಲಿಸಿದ ನಂತರ ಮಧ್ಯಾಹ್ನ ಬಲಿಬಾನವನ್ನು ಆಯಗಾರ ಬಳಗದಿಂದ ಸಮರ್ಪಿಸಲಾಯಿತು.

ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿ 4.15 ಹಿರೇಮಠದಿಂದ ಕ್ರೀಯಾಮೂರ್ತಿ ಶಿವಪ್ರಕಾಶ ಕೊಟ್ಟೂರು ದೇವರ ನೇತೃತ್ವದಲ್ಲಿ ಪಲ್ಲಕ್ಕಿಯಲ್ಲಿ ಉತ್ಸವ ಹೊರಟು ಹರಳಯ್ಯನಕೇರಿ ಸಮೀಪ ಆಗಮಿಸಿತು. ಈ ವೇಳೆ ಶ್ರೀಮಠದ ಧರ್ಮಕರ್ತರು ಶೇಖರಯ್ಯ, ದತ್ತಿ ಇಲಾಖೆ ಇಒ ಹನುಮಂತಪ್ಪ ಹಾಗೂ ಅರ್ಚಕರು, ಆಯಾಗಾರ ಬಳಗವು ಹರಳಯ್ಯನ ಸಮುದಾಯದ ದುರುಗಮ್ಮ ಹಾಗೂ ಉಡಿಸಲಮ್ಮ ಅವರ ಮನೆಗೆ ಆಗಮಿಸಿ ಈರ್ವರನ್ನು ಸ್ವಾಗತಿಸಿದರು.



ವಿಜಯನಗರ ಜಿಲ್ಲೆ ಕೊಟ್ಟೂರನಲ್ಲಿ ಶನಿವಾರ ಶ್ರೀ ಕೊಟ್ಟೂರೇಶ್ವರ ಸ್ವಾಮಿ ರಥ ಜರುಗುವ ಮುನ್ನ ಹರಳಯ್ಯನ ಸಮುದಾಯದ ದುರುಗಮ್ಮ ಕಳಸ. ಉಡಸಲಮ್ಮ ದೂಪದಾರತಿ ಬೆಳಗಿ ನೈವೇದ್ಯ ಸಮರ್ಪಿಸಿದರು. ಪರಂಪರೆಯ ಭಕ್ತಿಯ ಸೇವೆಗೆ ಭಕ್ತರು ಪಾಲ್ಗೊಂಡಿದ್ದರು.

ಹರಳಯ್ಯನ ಸಮುದಾಯದ ಈರ್ವ ಮಹಿಳೆಯರು ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಗೆ ಕಳಸ ಹಾಗೂ ದೂಪದಾರತಿ ಬೆಳಗಿದರು, ಅಲ್ಲಿಂದ ಶ್ರೀಸ್ವಾಮಿಯ ಪಲ್ಲಕ್ಕಿ ಉತ್ಸವವು ವಿವಿಧ ಮೇಳಗಳೊಂದಿಗೆ ಸಾಗಿ ರಥದ ಸುತ್ತ ಪ್ರದಕ್ಷಿಣೆ ಹಾಕಿ 5.35 ಕ್ಕೆ ಶ್ರೀ ಸ್ವಾಮಿಯು ರಥವೇರಿತು.

ಪ್ರತಿ ವರ್ಷಕ್ಕಿಂತ ಈ ವರ್ಷ, ಮೂಲನಕ್ಷತ್ರ ತಡವಾಗಿ ಕೂಡಿ ರಥ ಸಾಗಿದರೂ ಭಕ್ತರ ಉತ್ಸಾಹ ಕಡಿಮೆಯಾಗದೆ ಶ್ರೀಸ್ವಾಮಿಯ ಜೈ ಕಾರ ಮುಗಿಲು ಮುಟ್ಟಿತು, ಬಾಳೆ ಹಣ್ಣು, ಉತ್ತುತ್ತಿ,ದವನ ಎಸೆದು ಸಂಭ್ರಮಿಸಿ ನಮಿಸಿದರು, ರಥೋತ್ಸವದಲ್ಲಿ ಅಸಂಖ್ಯಾತ ಭಕ್ತರು ಪಾಲ್ಗೊಂಡಿದ್ದರು.

ರಥೋತ್ಸವವು ರಾಜಗಾಂಭೀರ್ಯದಿಂದ ಪಾದಗಟ್ಟೆವರೆಗೆ ಸಾಗಿ ಮರುಳಿ 7.15 ರ ನಂತರ ರಥವು ಮೂಲಸ್ಥಾನಕ್ಕೆ ಬಂದು ವಿರಾಮಿಸಿತು.ರಥ ಮೂಲಸ್ಥಾನಕ್ಕೆ ನಿಂತ ನಂತರ ಉತ್ಸವ ಮೂರ್ತಿಯನ್ನು ಮಂಗಳವಾದ್ಯ ಗಳೊಂದಿಗೆ ಆಯಗಾರರು, ಭಕ್ತರು, ಆರ್ಚಕರು ಕೊಂಡೊಯ್ದು ಶ್ರೀ ಮಠದಲ್ಲಿ ಪ್ರತಿಷ್ಠಾಪಿಸಿ ಪ್ರತಿವರ್ಷದ ಪದ್ಧತಿಯಂತೆ ಮಹಾಮಂಗಳಾರತಿ ಧಾರ್ಮಿಕ ಕೈಂಕಾರ್ಯಗಳನ್ನು ನೆರವೇರಿಸಿದರು.

ರಥೋತ್ಸವದಲ್ಲಿ ಪೊಲೀಸರು ಸೂಕ್ತ ಬಿಗಿ ಬಂದೋಬಸ್ತ್ ಒದಗಿಸಿದ್ದರು, ರಥೋತ್ಸವವನ್ನು ವೀಕ್ಷಿಸಿ ಭಕ್ತರು ತಮ್ಮ ತಮ್ಮ ಊರುಗಳಿಗೆ ಮರುಳುತ್ತಿದ್ದ ವೇಳೆ ಟ್ರಾಫಿಕ್ ನಿರ್ಮಾಣವಾಗಿತ್ತು. ಈ ವೇಳೆ ವಿಜಯನಗರ ಎಸ್ಪಿ ಬಿ.ಎಲ್.ಶ್ರೀಹರಿಬಾಬು ಟ್ರಾಫಿಕ್ ಕಾರ್ಯ ನಿರ್ವಹಿಸಿ, ಸುಗಮಸಂಚಾರಕ್ಕೆ ಅನುಮಾಡಿಕೊಟ್ಟು ವಿಶೇಷ ಕಾರ್ಯ ನಿರ್ವಹಿಸಿದ ನಿಮಿತ್ತ ಭಕ್ತರು ಪ್ರಶಂಸೆ ವ್ಯಕ್ತಪಡಿಸಿದರು.


HAMPI TIMES VIJAYANAGARA

ನಿಮ್ಮ ಸಂಸ್ಥೆಯ ಬ್ರ್ಯಾಂಡಿಂಗ್, ಉತ್ಪನ್ನ, ಸೇವೆಗಳ ಪ್ರಚಾರ ಮತ್ತಷ್ಟು ಸುಲಭ!

ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಪ್ರಿಂಟ್ & ಡಿಜಿಟಲ್ ದಿನಪತ್ರಿಕೆ
Print & Digital News Paper

ಸ್ಥಳೀಯ ಹಾಗೂ ವ್ಯಾಪಕ ಮಟ್ಟದಲ್ಲಿ ಜನಪ್ರಿಯ
1 ಲಕ್ಷಕ್ಕೂ ಅಧಿಕ ಇ-ಪೇಪರ್ ಓದುಗರು

94486 33038 hampitimes@gmail.com

ನಿಮ್ಮ ಕೈಗೆಟಕುವ ದರದಲ್ಲಿ ಜಾಹೀರಾತುಗಳು...

ಹಂಪಿ ಟೈಮ್ಸ್ ಇ-ಪೇಪರ್

ಓದುಗರು:- ಕರ್ನಾಟಕ, ಮಹಾರಾಷ್ಟ್ರ, ಕೇರಳ, ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶ, ಉತ್ತರ ಪ್ರದೇಶ, ಗುಜರಾತ್, ಹರಿಯಾಣ, ರಾಜಸ್ಥಾನ & ಅಮೇರಿಕಾ, ಇಂಗ್ಲೆಂಡ್, ಕೆನಡಾ ಇತರೆ ರಾಷ್ಟ್ರಗಳಲ್ಲಿರುವ ಕನ್ನಡ ಓದುಗರ ಕೈಯಲ್ಲಿ ಹಂಪಿ ಟೈಮ್ಸ್ ಇ ಪೇಪರ್

# ಮಗು ಮನುಕುಲದ ಆಸ್ತಿಯಾಗಬೇಕು

## ರಾಜ್ಯಪಾಲ ಚಂದ್ರಶೇಖರ ಹೆಚ್. ವಿಜಯಶಂಕರ್ ಹೇಳಿಕೆ



■ **ಹಂಪಿ ಟೈಮ್ಸ್ ಕೊಪ್ಪಳ**

ಮಗುವನ್ನು ಮನುಕುಲದ ಆಸ್ತಿಯನ್ನಾಗಿ ಮಾಡುವ ಬಹುದೊಡ್ಡ ಜವಾಬ್ದಾರಿ ಸಮಾಜದ ಮೇಲಿದೆ ಎಂದು ಮೇಘಾಲಯ ರಾಜ್ಯದ ರಾಜ್ಯಪಾಲರಾದ ಗೌರವಾನ್ವಿತ ಚಂದ್ರಶೇಖರ ಹೆಚ್. ವಿಜಯಶಂಕರ್ ಹೇಳಿದರು.

ಅವರು ಶನಿವಾರ ದಿವ್ಯಾಂಗ ಮಕ್ಕಳ ಶಾಲೆ, ಹಿಂದು ಸೇವಾ ಪ್ರತಿಷ್ಠಾನ ಮತ್ತು ಮಹಾತ್ಮಗಾಂಧಿ ಅನಾಥ ಸೇವಾ ಟ್ರಸ್ಟ್ ಸಹಯೋಗದಲ್ಲಿ ಕೊಪ್ಪಳ ನಗರದಲ್ಲಿ ನಡೆಸುತ್ತಿರುವ ಅರುಣ ಚೇತನ ದಿವ್ಯಾಂಗ ಮಕ್ಕಳ ಶಾಲೆಗೆ ಭೇಟಿ ನೀಡಿದ ನಂತರ ಮಾತನಾಡಿದರು.

ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಜೊತೆಗೆ ಅವರಿಗೆ ಪೌಷ್ಟಿಕ ಆಹಾರ ಸಿಗಬೇಕು. 4 ರಿಂದ 14 ವರ್ಷದಲ್ಲಿ ಮಕ್ಕಳ ಶಾರೀರಿಕ ಬೆಳವಣಿಗೆ ಜೊತೆಗೆ ಅವರ ಮಾನಸಿಕ ಬೆಳವಣಿಗೆ ಸಹ ಆಗುತ್ತದೆ. ಕೆಲವೊಂದು ಮಕ್ಕಳ ಶಾರೀರಿಕ ಅಂಗವೈಕಲ್ಯ ಅನುವಂಶೀಕವಾಗಿ ಬರುತ್ತದೆ. ಅವರಿಗೆ ಉತ್ತಮ ಚಿಕಿತ್ಸೆ ನೀಡುವ ಮೂಲಕ ಗುಣಪಡಿಸುವ ಕೆಲಸ ಮಾಡಬೇಕು ಎಂದರು.

ಸಂಬಂಧಿಸಿದ ಇಲಾಖೆಯ ಮೂಲಕ ಇಂತಹ ಮಕ್ಕಳಿಗೆ ಸೌಲಭ್ಯಗಳನ್ನು ಒದಗಿಸುವ ಕೆಲಸ ಆಗಬೇಕು. ಮೈಸೂರಿನಲ್ಲಿ ಸ್ಪೀಚ್ ಅಂಡ್ ಹಿಯರಿಂಗ್ ಸಂಸ್ಥೆ ಇದೆ. ಇದು ಮೈಸೂರು ಮಹಾರಾಜರು ಪ್ರಾರಂಭಿಸಿದರು. ಈ ಸಂಸ್ಥೆ ಇಂತಹ ವಿಶೇಷ ಚೇತನ ಮಕ್ಕಳ ಸರ್ವೆಯನ್ನು ಆಗಾಗ ನಡೆಸುತ್ತಾರೆ. ನಮ್ಮ ಮಕ್ಕಳು ಆರೋಗ್ಯ ಪೂರ್ಣವಾಗಿ ಬದುಕಬೇಕು. ಸತ್ಯಸಾಯಿ ಟ್ರಸ್ಟಿನ ಮಧುಸುಧನ್ ಭಾಬಾ ಅವರು ಇಂತಹ ವಿಶೇಷ ಚೇತನ ಮಕ್ಕಳಿಗೆ ಉಚಿತ ಸೇವೆ ನೀಡುತ್ತಾರೆ. ಅವರಿಗೆ ಇಲ್ಲಿಗೆ ಬರಲು ತಿಳಿಸುತ್ತೇನೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ, ಮಾಜಿ ಶಾಸಕ ಬಸವರಾಜ ದಢೇಸೂಗೂರು, ಹಿಂದು ಸೇವಾ ಪ್ರತಿಷ್ಠಾನ ಸಂಸ್ಥೆಯ ಎಂ.ಡಿ ಮಿಲಿಂದ್, ಸಂಚಾಲಕ ಸುಧಾಕರ್, ಮಹೇಶ ನಾಲ್ವಾಡ್, ರಾಜೇಂದ್ರ ಜೈನ್ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು, ಅರುಣ ಚೇತನ ದಿವ್ಯಾಂಗ ಮಕ್ಕಳ ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿಗಳು ಸೇರಿದಂತೆ ಇತರರು ಉಪಸ್ಥಿತರಿದ್ದರು.



**2025ನೇ ಸಾಲಿನ ಪದ್ಮಶ್ರೀ ಪ್ರಶಸ್ತಿಗೆ ಭಾಜನರಾದ ಕೊಪ್ಪಳ ಜಿಲ್ಲೆಯ ಮೋರನಾಳ ಗ್ರಾಮದ ಭೀಮವ್ವ ದೊಡ್ಡ ಬಾಳಪ್ಪ ಶಿಳ್ಳೆಕ್ಯಾತರ ರವರ ಮನೆಗೆ ಶನಿವಾರದಂದು ಮೇಘಾಲಯ ರಾಜ್ಯದ ರಾಜ್ಯಪಾಲರಾದ ಚಂದ್ರಶೇಖರ ಹೆಚ್. ವಿಜಯಶಂಕರ ಅವರು ಭೇಟಿ ನೀಡಿ ಅಭಿನಂದಿಸಿದರು.**

# ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

## ಬೆಳಕಿನ ಹಾದಿ

ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**–: ಸಂಪಾದಕರು :–**

**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**

ಇ–ಮೇಲ್:hampitimes@gmail.com

M: 94486 33038

# ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ವೃತ್ತಿರಂಗಭೂಮಿಯ ಗ್ರಾಮೀಣ ಮೇರು ಕಲಾವಿದೆ

# ಡಾ.ಕೆ.ನಾಗರತ್ನಮ್ಮಗೆ ಗುಬ್ಬಿ ವೀರಣ್ಣ ಪ್ರಶಸ್ತಿ ಗರಿ



ಮರಿಯಮ್ಮನಹಳ್ಳಿ ಎಂದಾಕ್ಷಣ ನೆನಪಿಗೆ ಬರುವುದು ಕಲಾಗ್ರಾಮ. ನಟ ನಟಿಯರು, ಸಂಗೀತಗಾರರು, ಕಲಾವಿದರು ನಾಟಕಕಾರರು, ನಿರ್ದೇಶಕರು ಹೀಗೆ ರಂಗ ಭೂಮಿಯ ಹತ್ತಾರು ಬಗೆಯ ಕಲಾವಿದರನ್ನು ಈ ಗ್ರಾಮ ಒಳಗೊಂಡಿದೆ. ವಿಶೇಷವಾಗಿ 70ಕ್ಕೂ ಹೆಚ್ಚು ಮಹಿಳಾ ವೃತ್ತಿರಂಗ ಕಲಾವಿದೆಯರನ್ನು ಈ ಗ್ರಾಮ ನಾಡಿಗೆ ಕೊಟ್ಟಿರುವುದು ಚಾರಿತ್ರಿಕವಾದ ದ್ದಾಗಿದೆ. ಇಷ್ಟೊಂದು ಗ್ರಾಮೀಣ ರಂಗಭೂಮಿಯ ಕಲಾವಿದರನ್ನು ಹೊಂದಿರುವುದರಿಂದ ಈ ಗ್ರಾಮ ವನ್ನು ಕಲಾಗ್ರಾಮ ಎಂದೆ ಕರೆಯಲಾಗುತ್ತಿದೆ. ಈ ಗ್ರಾಮದ ಪ್ರತಿ ಕುಟುಂಬದಿಂದ ಒಬ್ಬೊಬ್ಬ ಕಲಾವಿದರು ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಈ ಕಲಾವಿದರುಗಳಲ್ಲಿ ಈಗ ಡಾ. ಕೆ ನಾಗರತ್ನಮ್ಮ ಅತ್ಯಂತ ಹಿರಿಯ ಹಾಗೂ ಬಹುಮುಖ ಪ್ರತಿಭೆಯ ಮೇರು ಕಲಾವಿದೆಯಾಗಿದ್ದಾರೆ.

ಅಖಂಡ ಬಳ್ಳಾರಿ ಜಿಲ್ಲೆಯ ವೃತ್ತಿರಂಗಭೂಮಿಯ ನಾಡೋಜ ಸುಭದ್ರಮ್ಮ ಮನ್ಸೂರ್, ದುರ್ಗದಾಸ್, ಏಣಗಿ ಖಾಸಿಂಸಾಬ್, ಎಲಿವಾಳ ಸಿದ್ದಯ್ಯ, ಹಾಗೂ ಜಾನಪದ ತಜ್ಞ ಮುದೇನೂರ್ ಸಂಗಣ್ಣ, ಸಾಂಸ್ಕೃತಿಕ ರಾಯಭಾರಿ ಎಂ.ಪಿ. ಪ್ರಕಾಶ್, ರಂಗದಿಗ್ಗಜ ಕೋಗಳಿ ಪಂಪಣ್ಣ, ರಂಗ ನಿರ್ದೇಶಕ ಭಾ.ಮ. ಸೋಮಣ್ಣ, ಪದ್ಮಶ್ರೀ ಮಂಜಮ್ಮ ಜೋಗತಿ, ಡಾ.ಅಂಬಣ್ಣ, ಗುಡಿಹಳ್ಳಿ ನಾಗರಾಜ್ ಮೊದಲಾದ ರಂಗದಿಗ್ಗಜರ ಒಡನಾಟದಲ್ಲಿ ಬೆಳೆದು ಬಂದವರು ನಾಗರತ್ನಮ್ಮ. ಸುಭದ್ರಮ್ಮ ಮನ್ಸೂರ್ ಉಮಾಶ್ರೀ ಏಣಿಗೆ ಖಾಸಿಂಸಾಬ್ ಮೊದಲಾದ ರಂಗದಿಗ್ಗಜರೊಂದಿಗೆ ಪಾತ್ರಗಳನ್ನು ನಿರ್ವಹಿಸಿದವರು.

ವೃತ್ತಿ ರಂಗಭೂಮಿಯ ಮೂಲಕ ರಂಗ ಪ್ರವೇಶ ಮಾಡಿದ ಇವರು, ಮುಂದೆ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳನ್ನು, ಜಾನಪದ ಪ್ರಕಾರದ ನಾಟಕಗಳಲ್ಲಿಯು ಇಷ್ಟೇ ಅಲ್ಲ, ಬೀದಿ ನಾಟಕಗಳಲ್ಲಿಯು ಅಭಿನಯಿಸುವ ಮೂಲಕ ರಂಗಭೂಮಿಯ ಎಲ್ಲ ಪ್ರಕಾರಗಳಲ್ಲಿ ಇವರು ಅಭಿನಯಿಸಿದ್ದಾರೆ. ಏಡ್ಸ್ ವಿರುದ್ಧದ ಜನಜಾಗೃತಿ ಅಭಿಯಾನ, ಸಾಕ್ಷರತೆ ಹಾಗೂ ಸರ್ವ ಶಿಕ್ಷಣ ಅಭಿಯಾನ ಮೊದಲಾದ ಸರಕಾರದ ಕಾರ್ಯಕ್ರಮಗಳಲ್ಲಿ ರಾಯಭಾರಿಯಾಗಿ ಬೀದಿ ನಾಟಕಗಳನ್ನು ಹಳ್ಳಿಹಳ್ಳಿಗಳಲ್ಲಿ ಪ್ರದರ್ಶಿಸಿ ಜನಜಾಗೃತಿ ಯನ್ನುಂಟು ಮಾಡಿದ ಹೆಗ್ಗಳಿಕೆ ನಾಗರತ್ನಮ್ಮ ಅವರದ್ದು. ಹೀಗೆ ರಂಗಭೂಮಿಯ ಎಲ್ಲಾ ಪ್ರಕಾರಗಳ ಅಭಿನಯಿಸಿ ಅಪಾರವಾದ ಅನುಭವವನ್ನು ಹಾಗೂ ಪ್ರಭುದ್ಧತೆಯನ್ನು ಪಡೆದುಕೊಂಡ ಮೇರು ಕಲಾವಿದೆ ನಾಗರತ್ನಮ್ಮನವರು. ವಿದ್ಯಾರ್ಥಿ ದಿಸೆಯಲ್ಲಿ ರಂಗಭೂಮಿ ಯಲ್ಲಿ ಗುರುತಿಸಿಕೊಂಡು ಮುಂದೆ ಸುಮಾರು ಆರು ದಶಕಗಳ ಕಾಲ ತಮ್ಮ ಸುಧೀರ್ಘವಾದ ರಂಗ ಬದುಕನ್ನು ನಡೆಸಿಕೊಂಡು ಬಂದವರು. ಹತ್ತು ವರ್ಷದವಳಿದ್ದಾಗ ಉತ್ಸಾಹ ಆಸಕ್ತಿಯಿಂದ ನಾಟಕ ಪ್ರವೇಶಿಸಿದ ಇವರು ಈಗ 70ರ ವಯಮಾನದಲ್ಲಿಯೂ ರಂಗಭೂಮಿಯ ನಟನೆ, ರಂಗಭೂಮಿಯ ವಿಷಯ ಬಂದಾಗ ಅದೇ ಉತ್ಸಾಹ ಆಸಕ್ತಿ ಪ್ರೀತಿ, ಗೌರವ ಇವರಲ್ಲಿ ಕಂಡುಬರುತ್ತದೆ. ರಂಗಭೂಮಿಯನ್ನು ಜೀವನದ ಉಸಿರಾಗಿಸಿಕೊಂಡಿರುವ ಇವರು ರಂಗಭೂಮಿಯಿಂದ ಅನೇಕ ಕಷ್ಟ ನಷ್ಟಗಳನ್ನು ಸಮಸ್ಯೆಗಳನ್ನು ಅವಮಾನಗಳನ್ನು ಎದುರಿಸಿಕೊಂಡೇ ಬಂದವರು, ಆದರೂ ರಂಗಭೂಮಿಯ ಆಸಕ್ತಿ,ಗೀಳಿನಿಂದ, ನಟನೆಯಿಂದ ಯಾವತ್ತು ಹಿಂದೆ ಸರಿದವರಲ್ಲ. ವೃತ್ತಿರಂಗಭೂಮಿಯ ಸುಧೀರ್ಘ ಬಣ್ಣದ ಬದುಕಿನ ಹಾದಿ ಹಾಗೂ ಇವರ ಕಂಡುಂಡ ರಂಗಾನುಭವ, ಪಡೆದ ಜ್ಞಾನ ಅಪಾರವಾದದ್ದು. ರಂಗಭೂಮಿಗೆ ಅದರಲ್ಲೂ ಗ್ರಾಮೀಣ ರಂಗಭೂಮಿ, ವೃತ್ತಿರಂಗಭೂಮಿ, ಹವ್ಯಾಸಿ ರಂಗಭೂಮಿಯಲ್ಲಿ ನಟಿಸುತ್ತಾ ಬಂದಿದ್ದಾರೆ. ಇವರು ಯಾವುದೇ ರಂಗಶಾಲೆ ಯಲ್ಲಾ ಗಲಿ ಅಥವಾ ಯಾವುದೇ ಸಾಂಪ್ರದಾಯಿಕ ರಂಗ ಶಿಕ್ಷಣ ವನ್ನು ಸಹ ಪಡೆದವರಲ್ಲ. ಕೇವಲ ಆಸಕ್ತಿ ಕುತೂಹಲಗಳಿಂದ ರಂಗಭೂಮಿಯ ಗೀಳನ್ನು ಹಚ್ಚಿಕೊಂಡು ಪಾತ್ರಗಳನ್ನು ಮಾಡುತ್ತಾ ಮಾಡುತ್ತಾ ಹಾಗೂ ರಂಗಭೂಮಿಯ ಜಿಜ್ಞಾಸುಗಳ ಒಡನಾಟ, ಅನುಸಂಧಾನಗಳ ಮೂಲಕ ಅದರ ಆಳ ಅಗಲಗಳನ್ನು ಅರಿಯುತ್ತಾ ರಂಗಭೂಮಿಯ ಪರಂಪರೆಯನ್ನು ಉಳಿಸಿ ಬೆಳೆಸಿಕೊಂಡು ಬಂದವರು.



**ಎಂ.ಎಂ.ಶಿವಪ್ರಕಾಶ**
**ಲೇಖಕರು: ಹೊಸಪೇಟೆ**
**ಮೊ: 9449654489**

Scan For Digital Colourful
HAMPI TIMES E-paper

ವೃತ್ತಿ ರಂಗಭೂಮಿಯಲ್ಲಿ ಬೆಳೆದು ಬಂದ ಇವರು, ಪೌರಾಣಿಕ ಐತಿಹಾಸಿಕ ನಾಟಕ ಗಳನ್ನು ಆಡುತ್ತಾ ಮುಂದೆ ಸಾಮಾಜಿಕ ಹಾಗೂ ಜಾನಪದ ರಂಗಪ್ರಕಾರದ ನಾಟಕಗ ಳಲ್ಲಿಯು ಸಹ ಅಭಿನಯಿಸಿ ತಮ್ಮ ರಂಗಾಸಕ್ತಿ, ಕುತೂಹಲ ವನ್ನು ಹಿಗ್ಗಿಸಿಕೊಂಡ ವರು.. ಪೌರಾಣಿಕ ನಾಟಕಗಳಾದ ವೀರ ಅಭಿಮನ್ಯು, ಕುರುಕ್ಷೇತ್ರ, ರಕ್ತರಾತ್ರಿ, ಭಕ್ತ ಸುಧನ್ವ, ಸತ್ಯಹರಿಶ್ಚಂದ್ರ, ಹೇಮರೆಡ್ಡಿ ಮಲ್ಲಮ್ಮ, ಮುಂತಾದ ನಾಟಕಗಳಲ್ಲಿ ಅಭಿನಯಿಸಿ ಪ್ರಸಿದ್ಧಿ ಪಡೆದವರು. ಐತಿಹಾಸಿಕ ನಾಟಕಗಳಾದ ಸುರಪುರದ ವೆಂಕಟಪ್ಪ ನಾಯಕ, ನೆಲ್ಲೂರು ನಂಬೆಕ್ಕ, ಎಚ್ಚಮ್ಮ ನಾಯಕ, ಕುಮಾರರಾಮ, ಬಸವೇಶ್ವರ, ವರಪ್ರದಾನ, ರತ್ನ ಸಿಂಹಾಸನ ಮೊದಲಾದ ನಾಟಕಗಳಲ್ಲಿ ಐತಿಹಾಸಿಕ ಪಾತ್ರಗಳನ್ನು ಅಭಿನಯಿಸಿ ದವರು. ಸಾಮಾಜಿಕ ನಾಟಕಗಳಾದ ಅಣ್ಣ ತಂಗಿ, ವರ ನೋಡಿ ಹೆಣ್ಣು ಕೊಡಿ, ಗೌಡ್ರು ಗದ್ಲ, ಬಸ್ ಕಂಡಕ್ಟರ್, ಹೀಗೆ ನೂರಾರು ಸಾಮಾಜಿಕ ನಾಟಕಗಳಲ್ಲಿ ಇವರ ಅಭಿನಯ ಕಂಡು ಜನರು ಮೆಚ್ಚಿಗೆ ವ್ಯಕ್ತಪಡಿಸಿ, ಆ ಪಾತ್ರಗಳಿಗೆ ನಾಗರತ್ನಮ್ಮ ಅವರೇ ಆಗಬೇಕು ಎಂದು ಹಠ ಹಿಡಿದು ಕರೆಸಿಕೊಂಡು ಪಾತ್ರ ಮಾಡಿಸಿದ್ದು ಇದೆ. ಪೌರಾಣಿಕ ಐತಿಹಾಸಿಕ ಸಾಮಾಜಿಕ ನಾಟಕಗಳಲ್ಲಿ ಪಾತ್ರಗಳನ್ನು ಅಭಿನಯಿಸಿದ್ದ ಇವರಿಗೆ ಆಧುನಿಕ ರಂಗಭೂಮಿಯ ಸಾಮಾಜಿಕ, ಜಾನಪದ ರಂಗಭೂಮಿಯ ಹೊಸ ನಾಟಕಗಳಲ್ಲಿ ಪಾತ್ರಗಳನ್ನು ಮಾಡುವ ಅವಕಾಶಗಳನ್ನು ಎಂ.ಪಿ.ಪ್ರಕಾಶ್, ಮುದೇನೂರು ಸಂಗಣ್ಣನವರು ಕಲ್ಪಿಸಿಕೊಟ್ಟರು. ವೃತ್ತಿ ರಂಗಭೂಮಿ ಮತ್ತು ಸಾಮಾಜಿಕ ನಾಟಕಗಳಲ್ಲಿ ಅಭಿನಯಿಸಿದ ಇವರನ್ನು ಜಾನಪದ ರಂಗ ಭೂಮಿಗೆ ಕರೆದುಕೊಂಡು ಬಂದು ಪಾತ್ರಗಳನ್ನು ಪರಿಚಯಿಸುವ ಮೂಲಕ ಅಭಿನಯಗಳನ್ನು ಮಾಡಿಸಿದರು. ಈ ಹೊಸ ಅಲೆಯ ನಾಟಕಗಳು ಇವರಿಗೆ ಹೊಸ ಅನುಭವವನ್ನು ತಂದು ಕೊಟ್ಟವು. ಅವುಗಳಲ್ಲಿ ಎಂ.ಪಿ. ಪ್ರಕಾಶ್ ನಿರ್ದೇಶನದ ಜೋಕುಮಾರಸ್ವಾಮಿ, ಸಂಗ್ಯಾಬಾಳ್ಯ , ಮುದೇನೂರು ಸಂಗಣ್ಣನವರ ಬೆಳ್ಳಕ್ಕಿ ಹಿಂಡುಬೆದರಾವು, ಶೀಲವತಿ, ಲಕ್ಷಪತಿರಾಜ, ದೊಡ್ಡಪ್ಪ, ರಂಗಾತರಂಗ ವಿಳಾಸ, ಕಾಡು ಕುದುರೆ, ರೊಟ್ಟಿ ಋಣ, ಊರುಕೇರಿ ರಾವಿ ನದಿಯ ದಡದ ಮೇಲೆ ಬೆಳಗಿನ ಮೊದಲಾದ ನಾಟಕಗಳಲ್ಲಿಯೂ ಎಂ.ಪಿ. ಪ್ರಕಾಶ್ ಹಾಗೂ ಮುದೇನೂರು ಸಂಗಣ್ಣನವರ ಒತ್ತಾಯ ಮಾರ್ಗದರ್ಶನ ದಿಂದ ಪಾತ್ರಗಳನ್ನು ನಿರ್ವಹಿಸಿ ಅವುಗಳಲ್ಲಿಯೂ ಅತ್ಯಂತ ಸಮರ್ಥವಾಗಿ ನಟನೆಯನ್ನು ಮಾಡಿ ರಾಜ್ಯಮಟ್ಟದಲ್ಲಿ ಅಂತರಾಜ್ಯ ಮಟ್ಟದಲ್ಲಿಯೂ ಹೆಸರು ಪಡೆದ ಕೀರ್ತಿ ನಾಗರತ್ನಮ್ಮ ಅವರಿಗೆ ಸಲ್ಲುತ್ತದೆ.

ಎಂ.ಪಿ.ಪ್ರಕಾಶ್ ಅವರ ಸೂರ್ಯ ಶಿಕಾರಿ ನಾಟಕವನ್ನು ಖ್ಯಾತ ನಿರ್ದೇಶಕ ಹುಲುಗಪ್ಪ ಕಟ್ಟಿಮನಿ ಅವರ ನಿರ್ದೇಶನದಲ್ಲಿ ನಟಿಸಿ ಈ ಹೊಸ ಬಗೆ ನಾಟಕದಲ್ಲಿಯೂ ಸೈ ಎನಿಸಿಕೊಂಡವರು ಇವರು. ಎಲ್ಲಾ ರಂಗ ದಿಗ್ಗಜರ ಒಡನಾಟದ ಅನುಭವದಿಂದಾಗಿ ಮರಿಯಮ್ಮನ ಹಳ್ಳಿಯಲ್ಲಿ ಅನೇಕ ರಂಗ ಚಟುವಟಿಕೆಗಳನ್ನು ಏರ್ಪಡಿಸಿ ಆ ಮೂಲಕ ರಂಗಭೂಮಿಗೆ ಹೊಸ ಆಯಾಮಗಳನ್ನು ಒದಗಿಸಿದವರು. ನಾಟಕಕಾರ ನಿರ್ದೇಶಕ ತಬಲವಾದಕ ಹೀಗೆ ರಂಗಭೂಮಿಯ ಬಹು ಮುಖ್ಯ ಆಯಾಮಗಳನ್ನು ಬಲ್ಲ ಮಾ.ಬ . ಸೋಮಣ್ಣ ಅವರು ಮರಿಯಮ್ಮನಹಳ್ಳಿಯಲ್ಲಿ ಲಲಿತಕಲಾರಂಗವನ್ನು ಸ್ಥಾಪಿಸಿದರು. ಇದರಿಂದ ಮರಿಯಮನಹಳ್ಳಿಯ ರಂಗ ಕಲಾವಿದರಿಗೆ ಹೊಸ ಚಿಂತನೆಯ, ಹೊಸ ಅಲೆಯ ನಾಟಕಗಳನ್ನು ಸೋಮಣ್ಣನವರು ನಿರ್ದೇಶನ ಮಾಡುವುದರ ಮೂಲಕ ಲಲಿತಕಲಾರಂಗವನ್ನು ನಾಡಿಗೆ ಪರಿಚಯಿಸಿದರು. ಈ ಲಲಿತ ಕಲಾರಂಗದಲ್ಲಿ ಮಹಿಳೆಯರೇ ಹೆಚ್ಚಾಗಿದ್ದು ಒಂದು ಬಾರಿ ಈ ಸಂಘದ ಅಧ್ಯಕ್ಷರಾಗಿ ನಾಗರತ್ನಮ್ಮನ ವರು ಆಯ್ಕೆಯಾಗಿ ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿವ ಮೂಲಕ ರಂಗಭೂಮಿಯನ್ನು ಗಟ್ಟಿಗೊಳಿಸಿದವರು.

ಬಡ ವಾಲ್ಮೀಕಿ ನಾಯಕ ಕುಟುಂಬದಲ್ಲಿ ನಾಗರತ್ನಮ್ಮ 1952 ರಲ್ಲಿ ಜನಿಸಿದರು. ಇವರ ತಂದೆ ಮಾರಪ್ಪ ತಾಯಿ ಸಿದ್ದಮ್ಮ. ಆ ಕಾಲದ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿ ಒಂದು ಹೊಸ ಭರವಸೆಯನ್ನ ಕುಟುಂಬದಲ್ಲಿ ಮೂಡಿಸಿದ್ದವರು. ಐದು ಜನ ತಂಗಿಯರು ಹಾಗೂ ಒಬ್ಬ ತಮ್ಮ ನಡುವೆ ಇವರು ಮನೆಯಲ್ಲಿ ಉತ್ಸಾಹದ ಮಗಳಾಗಿದ್ದರು. ಉತ್ಸಾಹದಿಂದಲೇ ಅವರು ಏನನ್ನಾದರೂ ಮಾಡಬೇಕು ಎಂಬ ತವಕದಿಂದ ರಂಗಭೂಮಿ ಪ್ರವೇಶಿಸಿ 10ನೇ ವಯಸ್ಸಿನಿಂದ ಪಾತ್ರಗಳನ್ನು ಮಾಡಲು ಪ್ರಾರಂಭಿಸಿದವರು. ಮುಂದೆ ತಮ್ಮ ಬದುಕನ್ನು ವೃತ್ತಿರಂಗಭೂಮಿಗಾಗಿ, ರಂಗಭೂಮಿಯ ಉಳಿವಿಗಾಗಿ ಮುಡುಪಾಗಿಟ್ಟವರು. ಇವರು ರಂಗಭೂಮಿಗೆ ಅಷ್ಟೇ ಅಲ್ಲ ರಾಜಕೀಯಕ್ಕೂ ಪ್ರವೇಶಿಸಿ ಹೊಸಪೇಟೆ ತಾಲೂಕ ಪಂಚಾಯಿತಿ ಸದಸ್ಯರಾಗಿ, ಉಪಾಧ್ಯಕ್ಷಯಾಗಿ ತಮ್ಮ ಸಮಾಜಸೇವೆಯ ಛಾಪನ್ನು ಮಾಡಿಸಿರುವವರು.

ಪೌರಾಣಿಕ ಐತಿಹಾಸಿಕ ಸಾಮಾಜಿಕ ಜಾನಪದ ಹೀಗೆ ಸುಮಾರು ಏಳು ಸಾವಿರಕ್ಕೂ ಹೆಚ್ಚು ನಾಟಕಗಳ ಪ್ರದರ್ಶನಗಳನ್ನು ನೀಡುವುದರ ಮೂಲಕ ಒಂದು ದಾಖಲೆಯನ್ನೇ ಸೃಷ್ಟಿಸಿದ್ದಾರೆ. ಇವರಿಗೆ ತಾಲೂಕು ಜಿಲ್ಲಾ ರಾಜ್ಯ ಮಟ್ಟದ ಹಲವಾರು ಪ್ರಶಸ್ತಿಗಳು ಲಭಿಸಿವೆ ಇದುವರೆಗೂ 35ಕ್ಕೂ ಹೆಚ್ಚು ನಾಟಕ ಸ್ಪರ್ಧೆಗಳಲ್ಲಿ ಇವರು ಅತ್ಯುತ್ತಮ ನಟಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ ಎಂದರೆ ಆಶ್ಚರ್ಯ ವಾಗಬಹುದು. ನೂರಾರು ಪ್ರಶಸ್ತಿಗಳನ್ನು ಸಂಘ ಸಂಸ್ಥೆಗಳು, ನಾಟಕ ಮಂಡಳಿಗಳು ನೀಡಿ ಗೌರವಿಸಿವೆ. ಕರ್ನಾಟಕ ನಾಟಕ ಅಕಾಡೆಮಿಯ ಸದಸ್ಯರಾಗಿ ಅಮೂಲ್ಯವಾದ ಸಲಹೆ ಮಾರ್ಗದರ್ಶನಗಳನ್ನು ನೀಡಿ ದವರು 1994 ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಅಖಿಲ ಭಾರತ ನಾಟಕೋತ್ಸವದಲ್ಲಿ ಪ್ರಶಸ್ತಿ. ಬೆಂಗಳೂರಿನ ಗುಬ್ಬಿ ವೀರಣ್ಣ ರಂಗಮಂದಿರದಲ್ಲಿ ಡಾ.ರಾಜಕುಮಾರ್ ಅವರಿಂದ ಗೌರವ ಸನ್ಮಾನ. ಸಾವಿತ್ರಮ್ಮ ದೇಜೆ ಗೌ ಮಹಿಳಾ ಪ್ರಶಸ್ತಿ. ಕರ್ನಾಟಕ ಸರ್ಕಾರದ ವಾಲ್ಮೀಕಿ ಪ್ರಶಸ್ತಿ. ಬಳ್ಳಾರಿಯ ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಹೀಗೆ ಹಲವಾರು ಗೌರವ ಪ್ರಶಸ್ತಿಗಳು ಸನ್ಮಾನಗಳು ಇವರಿಗೆ ಸಂದಿವೆ. 1996ರಲ್ಲಿ ಜನಪ್ರಿಯ ವಾರ ಪತ್ರಿಕೆ, ಸುಧಾ ಪತ್ರಿಕೆಯಲ್ಲಿ 19 ವಾರಗಳ ಕಾಲ ಇವರ ಆತ್ಮಕಥನ ಧಾರವಾಹಿಯಾಗಿ ಪ್ರಕಟವಾಗಿತ್ತು. ಒಬ್ಬ ರಂಗಭೂಮಿ ಕಲಾವಿದೆಯ ಜೀವನವನ್ನ ಆಧರಿಸಿ, ಧಾರವಾಹಿವಾಗಿ ಪ್ರತಿಷ್ಠಿತ ಸುಧಾ ಪತ್ರಿಕೆಯಲ್ಲಿ ಪ್ರಕಟವಾಗಿದ್ದು ಅತ್ಯಂತ ಹೆಮ್ಮೆಯ ಸಂಗತಿಯಾಗಿದೆ.

ಮರಿಯಮ್ಮನಹಳ್ಳಿಯಲ್ಲಿ ಮಹಿಳಾ ನಾಟಕ ಮಂಡಳಿಯೊಂದು ಸ್ಥಗಿತಗೊಂಡಿತ್ತು. ಈ ಸ್ಥಗಿತಗೊಂಡಿದ್ದ ಮಂಡಳಿಯನ್ನು ಮಹಿಳಾ ವೃತ್ತಿರಂಗ ಕಲಾವಿದರ ಸಂಘ ಎಂದು ಪುನರ್ ನಾಮಕರಣ ಮಾಡಿಅದರಅಧ್ಯಕ್ಷರಾಗಿಅದನ್ನುಮತ್ತೆಕ್ರಿಯಾಶೀಲಗೊಳಿಸಿದ್ದವರು ನಾಗರತ್ನಮ್ಮನವರು. ಮರಿಯಮ್ಮನಹಳ್ಳಿಯ ನೂರಾರು ಕಲಾವಿದ ರನ್ನು ಒಟ್ಟಿಗೆ ಸೇರಿಸಿ ನಾಟಕಗಳ ಪ್ರದರ್ಶನ, ನಾಟಕ ಶಿಬಿರ, ಕಲಾಶಿಬಿರ, ರಂಗ ಬಗ್ಗೆತರಬೇತಿ, ವಿಚಾರ ಸಂಕಿರಣ ಹೀಗೆ ಹಲವಾರು ಶಿಬಿರಗಳನ್ನು ಕಲಾವಿದರಿಗೆ ಏರ್ಪಡಿಸುವುದರ ಮೂಲಕ ನಾಗರತ್ನಮ್ಮ ನವರು ವೃತ್ತಿರಂಗಭೂಮಿ ಹವ್ಯಾಸಿ ರಂಗಭೂಮಿ ಹಾಗೂ ಆಧುನಿಕ ರಂಗಭೂಮಿಯ ನಡುವೆ ಸಮನ್ವತೆಯನ್ನು ಸಾಧಿಸಿ ರಂಗಭೂಮಿಯ ಈ ಎಲ್ಲ ಪ್ರಕಾರಗಳನ್ನು ಕಲಾವಿದರಿಗೆ, ಜನರಿಗೆ ಪರಿಚಯಿಸುವುದುರ ಮೂಲಕ ತಮ್ಮ ರಂಗಾಸಕ್ತಿಯನ್ನು ಸದಾ ಉಳಿಸಿಕೊಂಡು ಬಂದಿದ್ದಾರೆ.

70ರ ವಯಸ್ಸಿನಲ್ಲಿಯೂ ಡಾ. ನಾಗರತ್ನಮ್ಮನವರು ರಂಗಭೂಮಿ, ಕಲೆ, ಸಾಹಿತ್ಯ, ಸಂಸ್ಕೃತಿಯ ಕಾರ್ಯಕ್ರಮಗಳಲ್ಲಿ ಅತ್ಯಂತ ಆಸಕ್ತಿ ಉತ್ಸಾಹದಿಂದ ಪಾಲ್ಗೊಳ್ಳುತ್ತಿದ್ದಾರೆ. ಇವರು ವಿದ್ಯಾಭ್ಯಾಸ ಮಾಡಿದ್ದು ಎಸ್ಸೆಸ್ಸೆಲ್ಸಿ ವರೆಗೆ ಮಾತ್ರ ಆದರೆ ರಂಗಭೂಮಿಯ ಬದುಕಿನಲ್ಲಿ ಕಲಿತ ಪಾಠ ಅಪಾರವಾದದ್ದು ಹೀಗಾಗಿಯೇ ಇವರ ಬದುಕು ಕುರಿತು ಪದವಿ ತರಗತಿಗಳಿಗೆ ಪಠ್ಯವಾಗಿದೆ. ಅಕಾಡೆಮಿಗಳು ವಿಶ್ವವಿದ್ಯಾಲಯ ಗಳು ಸಂಘ ಸಂಸ್ಥೆಗಳು ಇವರನ್ನು ರಂಗಭೂಮಿ ಯ ಸಂಪನ್ಮೂಲ ವ್ಯಕ್ತಿಯಾಗಿ ಶಿಬಿರಗಳಿಗೆ, ಕಾರ್ಯ ಕ್ರಮಗಳಿಗೆ ಆಹ್ವಾನಿಸುತ್ತಿದ್ದಾರೆ. ಮರಿಯಮ್ಮನಹಳ್ಳಿ, ಹಂಪಿ, ಹೊಸಪೇಟೆಯ ಭಾಗದಲ್ಲಿ ಯಾವು ದಾದರೂ ಕಾರ್ಯಕ್ರಮಗಳು ಆಯೋಜನೆಗೊಂಡರೆ ದೂರದ ಬೆಂಗಳೂರು ದಾವಣಗೆರೆಯ ಮಕ್ಕಳ ಮನೆಯಲ್ಲಿ ಇರುವ ಇವರು, ಆಯೋಜಕರ ಆಮಂತ್ರಣಕ್ಕೂ ಕಾಯದೆ ಬಂದು, ಕಾರ್ಯಕ್ರಮದ ಮುಂದಿನ ಸಾಲಿನಲ್ಲಿ ಕುಳಿತು ಕಾರ್ಯಕ್ರಮಗಳನ್ನು ವೀಕ್ಷಿಸಿ ಆಯೋಜಕರ ಬೆನ್ನು ತಟ್ಟಿ ಹೋಗುವಂತ ದೊಡ್ಡ ಮನಸ್ಸು ಇವರದ್ದಾಗಿದೆ. ಬಳ್ಳಾರಿ ವಿಜಯನಗರ ಜಿಲ್ಲೆಯ ಅತ್ಯಂತ ಹೆಮ್ಮೆಯ ಹಿರಿಯ ರಂಗಭೂಮಿ ಕಲಾವಿದರಾದ ಇವರು ರಂಗಭೂಮಿಗೆ ನೀಡಿರುವ ಕೊಡುಗೆಗಳು ಅಪಾರವಾದವುಗಳಾಗಿವೆ. ರಂಗಭೂಮಿಯ ಅದರಲ್ಲೂ ವೃತ್ತಿರಂಗಭೂಮಿಯ ಸಂದರ್ಭದಲ್ಲಿ ಇವರು ಪಟ್ಟ ಕಷ್ಟಗಳು ಸಂಕಷ್ಟಗಳು ಅವಮಾನಗಳನ್ನು ಮೌನವಾಗಿ ನುಂಗಿ ಯಾರನ್ನು ಟೀಕಿಸದೆ, ದ್ವೇಷಿಸದೆ ಎಲ್ಲರೂ ನಮ್ಮವರು ಎನ್ನುವ ಹಾಗೂ ಹಿರಿಯರು ಕಿರಿಯರನ್ನು ಎಲ್ಲರನ್ನೂ ಒಂದೇ ರೀತಿ ಪ್ರೀತಿಸುವ ಗೌರವಿಸುವ ಇವರ ಗುಣ, ಮಾದರಿ ವ್ಯಕ್ತಿತ್ವ ಇವರಲ್ಲಿ ಕಾಣುತ್ತೇವೆ.

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

# AI ತಂತ್ರಜ್ಞಾನ - ಮಾನವ ಕಲ್ಯಾಣ

ಇತ್ತೀಚಿಗೆ ಭಾರತವೂ ಸೇರಿದಂತೆ ಜಗತ್ತಿನ ಮುಂದುವರಿದ ದೇಶಗಳು ಒಟ್ಟಾಗಿ "ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನ ಮತ್ತು ಮಾನವ ಕಲ್ಯಾಣ"ದ ಕುರಿತ ಅತ್ಯಂತ ಸಾಪಲ್ಯದಾಯಕವಾದ ಚರ್ಚೆಯನ್ನು ಕೈಗೊಂಡು ಪೂರಕವಾದ ನೀತಿ ನಿಯಮಗಳನ್ನು ರೂಪಿಸುವ ಕುರಿತು ಮಾತನಾಡಿದ್ದು ಅತ್ಯಂತ ಮಹತ್ವಪೂರ್ಣವಾದ ಬೆಳವಣಿಗೆಯಾಗಿದೆ. ಜಗತ್ತಿನ ಉಗಮ, ಮಾನವನ ವಿಕಾಸ ಮತ್ತು ವಾಸ್ತವದ ವೈಭವಪ್ರೇರಿತ ಜೀವನ ಶೈಲಿಯ ಮೂಲ ತಳಹದಿ ಮನುಷ್ಯನ ಕುತೂಹಲ ಮತ್ತು ಸಂಶೋಧನಾ ಪ್ರವೃತ್ತಿ ಎಂದರೆ ತಪ್ಪಾಗಲಾರದು. ಜೀವಜಗತ್ತಿನ ವಿಕಾಸ ಸಿದ್ಧಾಂತವನ್ನು ಸೂಕ್ಷ್ಮವಾಗಿ ಗಮನಿಸಿದಾಗ ಸ್ಪಷ್ಟವಾಗಿ ಗೋಚರಿಸುವ ಅಂಶವೆಂದರೆ, ಮಾನವನ ವಿಕಾಸದ ವಿವಿಧ ಹಂತಗಳಲ್ಲಿ ಉಂಟಾದಂತಹ ಮಹತ್ತರ ಶೋಧನೆಗಳು ಅವನನ್ನು ಇಂದು ಜೀವ ಸಂಕುಲದಲ್ಲೇ ವಿಶಿಷ್ಟ ಮತ್ತು ಬುದ್ಧಿವಂತ ಎನ್ನುವ ಹಣೆಪಟ್ಟಿಗೆ ಮತ್ತೊಂದು ಗರಿ ಸೇರಿಕೊಂಡು ನಾವಿಂದ ನೋಡುವ ಈ ವಾಸ್ತವಿಕ ವೈಭವಪೂರಿತ ಜಗತ್ತು ಮತ್ತಷ್ಟು ಪ್ರಜ್ವಲಿಸುವಂತಾಗಿದೆ.

ಕಾಡು ಕಲ್ಲಿನಿಂದ ಸೃಷ್ಟಿಸಿದ ಬೆಂಕಿಯಿಂದ ಹಿಡಿದು, ವಿವಿಧ ಕಲ್ಲಿನ ಆಯುಧಗಳಿಂದ ಮೊದಲಾಗಿ ನೀರೆತ್ತುವ ಚಕ್ರದಿಂದ ಹಿಡಿದು ಓಡಡುವ ವಾಹನ ಹಾರುವ ವಿಮಾನ ಮುಳುಗುವ ಸಬ್ ಮರೈನ್ ಗಳ ವರೆಗೆ, ಮದ್ದು ಗುಂಡು, ಮೊಬೈಲ್ ಗೆಜೆಟ್ ಗಳಿಂದ ಹಿಡಿದು ಅಣು ಪರಮಾಣು, ಗ್ರಹ ಉಪಗ್ರಹ ಗಳಂತಹ ಕ್ಲಿಷ್ಟ ಮತ್ತು ಸಂಕೀರ್ಣ ವಾದ ಜ್ಞಾನವನ್ನು ತನ್ನ ಕೈವಶ ಮಾಡಿಕೊಂಡು ಭೂಮಿಯ ಆಳ ಮತ್ತು ಆಕಾಶದ ಅನಂತದವರೆಗೆ ತನ್ನ ಕದಂಬ ಭಾಹುಗಳನ್ನು ಚಾಚುವಲ್ಲಿ ಯಶಸ್ವಿಯಾಗಿದ್ದಾನೆ. ಮಾನವ ಕಲ್ಯಾಣಕ್ಕಾಗಿ ಇಪ್ಪತ್ತೊಂದನೆ ಶತಮಾನದ ಆದಿಯಾಗಿ ಸದ್ಯದ ಅವಶ್ಯ ಮತ್ತು ಅನಿವಾರ್ಯ ಹಾಗು ಪ್ರತಿಯೊಂದು ದೇಶ ಹೊಂದಿರಲೇ ಬೇಕಾದಂತಹ ಅವಶ್ಯ ಜ್ಞಾನವಾದ ""ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನ ವನ್ನು ಅರಿತು ಅದನ್ನು "ಮಾನವ ಕಲ್ಯಾಣಕ್ಕಾಗಿ" ಬಳಸುವುದನ್ನೂ ಅದರ ಸುರಕ್ಷತೆಯ ಬದ್ಧತೆಯನ್ನು ಕರಗತಮಾಡಿಕೊಂಡು ಮತ್ತೊಂದು ತಂತ್ರಜ್ಞಾನದ ಕ್ರಾಂತಿಗೆ ಮುನ್ನುಡಿ ಬರೆಯಲು ಸರ್ವ ಸನ್ನದ್ಧನಾಗಿದ್ದಾನೆ.



ಜಿ ಶಿವಕುಮಾರ್ ಸೋಗಿ
ಲೇಖಕರು, ಕಾರವಾರ ಕೈಗಾ

Scan For Digital Colourful
HAMPI TIMES E-paper

ಸರಿ ಹಾಗಾದರೆ "ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನ ಮತ್ತು ಮಾನವ ಕಲ್ಯಾಣ"ದ ಕುರಿತ ವಿಸ್ತೃತ ಕಲಿಕೆಗಿಂತ ಮುಂಚೆ ಈ ಕೃತಕ ಬುದ್ಧಿಮತ್ತೆ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ಹಾಗು ಮಾನವ ಕಲ್ಯಾಣ ಎಂದರೇನು ಹಾಗೆಯೇ ಈ ಮಾನವ ಕಲ್ಯಾಣದಲ್ಲಿ ಕೃತಕ ಬುದ್ಧಿಮತ್ತೆ ತಂತ್ರಜ್ಞಾನದ ಪಾತ್ರ, ಮಹತ್ವ ಮತ್ತು ತೊರಬೇಕಾದ ಬದ್ಧತೆ, ಎದುರಾಗಬಹುದಾದ ಸಮಸ್ಯೆಗಳು, ಸವಾಲುಗಳು ಮತ್ತು ಪರಿಹಾರಕ ಮಾರ್ಗೋಪಾಯಗಳನ್ನು ತಿಳಿದುಕೊಳ್ಳೋಣ.

"ಉದ್ದೇಶಪೋರಕ ಒಂದಕ್ಕಿಂತ ಹೆಚ್ಚು ಮೂಲವಸ್ತುಗಳನ್ನು ಒಂದುಗೂಡಿಸಿ ವಿವಿಧ ಇತರೆ ಮಾನವ ಉಪಯುಕ್ತ ವಸ್ತುಗಳನ್ನು ತಯಾರಿಸುವ ಮತ್ತದನ್ನೇ ಬಳಸುವ ಕ್ರಿಯೆಗೆ ತಂತ್ರಜ್ಞಾನ" ಎನ್ನುತ್ತಾರೆ. "ಒಂದು ವಿಶಿಷ್ಟ ಜ್ಞಾನವನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ಉಪಯೋಗಕ್ಕೆ ಬರುವಂತೆ ಮಾಡುವುದೇ ತಂತ್ರಜ್ಞಾನ ಎನಿಸಿಕೊಳ್ಳುತ್ತದೆ. ಹೀಗೆ ಕಂಡುಕೊಂಡ ತಂತ್ರಜ್ಞಾನದಿಂದ ಮಾನವರಿಗೆ ಒಳ್ಳೆಯದಾದರೆ ಮಾನವನ ಕಲ್ಯಾಣವಾದರೆ ಮನುಕುಲದ ಉದ್ಧಾರಕ್ಕೆ ನಾಡಿನ ದೇಶದ ಇಡೀ ಲೋಕದ ಕಲ್ಯಾಣವಾದರೆ ಆ ತಂತ್ರಜ್ಞಾನದ ಸಾರ್ಥಕತೆಯ ಸಾಕಾರವಾದಂತೆ.



ಹಾಗೆಯೆ ಈ ತಂತ್ರಜ್ಞಾನ ಎನ್ನುವುದನ್ನು ಸ್ಪಷ್ಟ ಪಡಿಸಿಕೊಳ್ಳುವುದಾದರೆ ಈ ತಂತ್ರಜ್ಞಾನ ಎನ್ನುವುದು ನೇರನೇರವಾಗಿ ವಿಜ್ಞಾನದ ಒಂದು ಪ್ರಾಯೋಗಿಕ ಅನ್ವಯಿಕ(ಅಪ್ಲಿಕೇಶನ್ ) ಜ್ಞಾನ ಎಂದು ಕರೆಯಬಹುದು. ಇದು ಹೊಸ ಹೊಸ ತಂತ್ರಜ್ಞಾನದ ಆವಿಷ್ಕಾರಕ್ಕೆ ಮುನ್ನುಡಿಯಾಗಿದೆ. ಇಂತಹ ಹೊಸ ಹೊಸ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ಸಹಜವಾಗಿ ಆಳವಾದ ಆಲೋಚನೆ ಮತ್ತು ವೈಶಿಷ್ಟಪೂರ್ಣವಾದ ಕಲ್ಪನೆಯ ಅವಶ್ಯಕತೆ ಇದೆ, ಈ ವಿಜ್ಞಾನ ಮತ್ತು ತಂತ್ರಜ್ಞಾನದ ಎನ್ನುವ ಪದಗಳು ಪರಸ್ಪರ ಒಂದು ರೀತಿಯಲ್ಲಿ ಒಂದೇ ನಾಣ್ಯದ ಎರಡು ಮುಖಗಳ ಸಂಬಂಧ ಇವು ಪರಸ್ಪರ ಅವಲಂಬಿಗಳಾಗಿವೆ.

ಇನ್ನೂ ಕೃತಕ ಬುದ್ಧಿಮತ್ತೆ ಎಂಬುದು ಸದ್ಯದ ಜಗತ್ತಿನ ಹಾಟ್ ನ್ಯೂಸ್ ಎಂದರೆ ತಪ್ಪಾಗಲಾರದು. ಈಡೀ ಪ್ರಪಂಚದಲ್ಲೇ ಅತೀ ಚರ್ಚಿತ ವಿಷಯ ಮತ್ತು ಜಗತ್ತಿನ ತಂತ್ರಜ್ಞಾನ ಕ್ಷೇತ್ರದಲ್ಲಿ ಅತ್ಯಂತ ಪ್ರಭಾವಶಾಲಿ ಹಾಗು ಬಹುವಿಧವಾದ ವ್ಯಾಪ್ತಿ ಮತ್ತು ವ್ಯಾಪಕತೆಯನ್ನು ಹೊಂದಿರುವ ಜ್ಞಾನದ ಆವೀಷ್ಕಾರ ಎಂದರೆ ಅಶ್ಚರಿಪಡಬೇಕಾಗಿಲ್ಲ..!.

ಇನ್ನು "ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನ" ಎನ್ನುವುದು ಕೃತಕ ಬುದ್ಧಿಮತ್ತೆಯ ಜ್ಞಾನ ಅಂದರೆ ಸಹಜ ಮಾನವನ ಕಲ್ಪನೆ, ವಿಷಯ ವಸ್ತು, ವಿಚಾರಗಳ ಸಂಸ್ಕರಣೆ, ಆಯ್ಕೆ ಮತ್ತು ತಾರ್ಕಿಕ ನಿರ್ಣಯಗಳ ಹಾಗು ವಿಜ್ಞಾನ, ತಂತ್ರಜ್ಞಾನಗಳು ಒಟ್ಟರೆಯಾಗಿ ಹೊರಹೊಮ್ಮಿದ ಪಲಿತಾಂಶ ಎಂದರೆ ಅತ್ಯಂತ ಸೂಕ್ತವೆನಿಸುತ್ತದೆ. ಈ ತಂತ್ರಜ್ಞಾನಗಳ ಅಭಿವೃದ್ಧಿಯೂ ಮಾನವ ಕುಲಕೋಟಿಗೆ ಮತ್ತವರ ಮಹತ್ವಾಕಾಂಕ್ಷೆಗಳನ್ನು ಸಾಧಿಸಲು ಸಹಾಯ ಮಾಡಿ ಅವನ ಜೀವನವನ್ನು ಸರಳ ಮತ್ತು ಸುಲಭವಾಗಿಸುವ ಭರವಸೆಯನ್ನು ಖಾತ್ರಿಪಡಿಸಿದೆ.

"ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನ ಮತ್ತು ಮಾನವ ಕಲ್ಯಾಣ" ದ ದೃಷ್ಟಿಕೋನದಿಂದ ನಾವು ನೋಡುವುದಾದರೆ ಕೃತಕ ಬುದ್ಧಿಮತ್ತೆಯ ಶಕ್ತಿಯ ವಿವಿಧ ಉಪಯೋಗಗಳನ್ನು ಅದರ ವಿಸ್ತಾರ ಮತ್ತು ವ್ಯಾಪ್ತಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾಗಿದೆ. ನಾವೀಗ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನದ ಅತ್ಯಂತ ಅದ್ಭುತವಾದ ಮಾನವ ಕಲ್ಯಾಣಕರ ಅನ್ವಯಿಕ ಜ್ಞಾನದ ವ್ಯಾಪ್ತತೆಯನ್ನು ವಾಸ್ತವಿಕ ಪ್ರಪಂಚದಲ್ಲಿ ಇದರ ಅನ್ವಯಿಕದ ಕಬಂಧ ಬಾಹುವಿನ ಪರಿಣಾಮವನ್ನು ಅಂದಾಜಿಸುವಲ್ಲಿ ಸರಿಯಾದ ಹೆಜ್ಜೆಯನ್ನು ಇಡಬೇಕಾಗದ ಜವಾಬ್ದಾರಿ ಇಂದಿನ ಅತೀ ಅವಶ್ಯಕ ಮತ್ತು ಅನಿವಾರ್ಯ ಕಾಳಜಿಯಾಗಿದೆ.

ಕೃತಕ ಬುದ್ಧಿಮತ್ತೆಯ ಉಪಯೋಗ ನಮ್ಮ ನಿತ್ಯ ಜೀವನದ ಭಾಗವೇ ಆಗಿ ಹೋಗಿದೆ ಎಂದರೆ ತಪ್ಪೇನಿಲ್ಲ ಏಕೆಂದರೆ ನಾವಿಂದು ನೋಡುವ ಆರೋಗ್ಯ, ಕೈಗಾರಿಕೆ/ ಉದ್ಯಮದಲ್ಲಿ,ಕೃಷಿ,ವಿದ್ಯುತ್ ಉತ್ಪಾದನೆಯಲ್ಲಿ, ಅಹಾರ ಔಷಧಗಳಲ್ಲಿ, ಓದು ಬರಹ ಮತ್ತು ಅನೇಕ ಸಂಪನ್ಮೂಲಗಳನ್ನು ಪತ್ತೆ ಹಚ್ಚುವಲ್ಲಿ, ನದಿ, ನೀರು ಜಲಚರಗಳನ್ನು ಅವುಗಳ ವರ್ತನೆಯನ್ನು ಅದ್ಯಯನ ಮಾಡುವಲ್ಲಿ, ಮಕ್ಕಳಾಡುವ ಸಣ್ಣ ಸಣ್ಣ ಆಟದ ಸಾಮಾನುಗಳಿಂದ ಹಿಡಿದು ಅಂತರಿಕ್ಷದಲ್ಲಿ ಹಾರುವ ರಾಕೆಟ್ ಗಳ ವರೆಗೆ ಇತ್ತೀಚಿಗೆ ಭಾರತದ ಹೆಮ್ಮೆಯ ಚಂದ್ರಯಾನ–3 ರ ವರೆಗೆ, ಕೃತಕ ಅಂಗಾಂಗಗಳ ಜೋಡಣೆಯತನಕ ಬಂದು, ಇನ್ನೇನು ಮಾನವನೂ ಸೇರಿದಂದತೆ ಅನೇಕ ತದ್ರೂಪಿಗಳನ್ನು ಸೃಷ್ಟಿಸುವವರಿಗೆ ಬೆಳೆದು ನಿಂತಿದೆ ಈ ಕೃತಕ ಬುದ್ಧಿಮತ್ತೆಯ ಜ್ಞಾನ.

ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನದ ಕುರಿತ ಒಂದು ಆತಂಕ ಸದ್ಯಕ್ಕೆ ಪ್ರಪಂಚದಲ್ಲಿ ಮುಂಚೂಣಿ ಚರ್ಚೆಯಲ್ಲಿದ್ದರೂ, ಇದರ ಅನ್ವಯಿಕದ ಆಳ–ಅಗಲವನ್ನು ಗಮನಿಸಿದರೆ ಇದರಿಂದ ಮಾನವ ಕಲ್ಯಾಣ ಶತಸಿದ್ಧ ಆದರೆ ಜೊತೆಗೊಂದಿಷ್ಟು ಆತಂಕ ಮನೆಮಾಡಿರುವುದರಿಂದ ಇದರ ಸಂಶೋಧನೆ ಯಲ್ಲಿ ತೊಡಗಿಕೊಂಡಿರುವ ಮುಂಚೂಣಿ ರಾಷ್ಟ್ರಗಳು "ಕೃತಕ ಬುದ್ಧಿಮತ್ತೆಯ" ಗುರಿ ಮಾನವ ಕಲ್ಯಾಣಕ್ಕಾಗಿ ಮೀಸಲಾಗಬೇಕೆಂದೇ ಅನೇಕ ಸಂಘ, ಸಂಸ್ಥೆಗಳು ರಾಷ್ಟ್ರ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ತಮ್ಮ ನಿತ್ಯ ಮತ್ತು ನಿರಂತರ ಪ್ರಯತ್ನಗಳನ್ನು ಮಾಡುತ್ತಿವೆ. ಇವುಗಳ ಮುಖ್ಯ ಗುರು ಉದ್ದೇಶಗಳೆ "ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವನ್ನು" ಮಾನವರ ಕಲ್ಯಾಣಕ್ಕಾಗಿ ಬಳಸುವುದು ಮತ್ತು ಇದನ್ನು ವಿಶ್ವದ ಜನರಿಗೆ ವಿಶ್ವಾಸಪೂರ್ಣವಾಗಿ ಮನವರಿಕೆ ಮಾಡಿಕೊಡುವುದಾಗಿದೆ. ಹೀಗೆ ಅತ್ಯದ್ಭುತವಾದ ಈ ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನವನ್ನು ಸರಿಯಾಗಿ ಯೋಚಿಸಿ, ಯುಕ್ತ ಮಾರ್ಗದಲ್ಲಿ ಯೋಜಿಸಿ ಮಾನವ ಹಿತ ದೃಷ್ಟಿಯಿಂದ ಜೀವಜಗತ್ತಿನ ಏಳ್ಗೆಯ ದೃಷ್ಟಿಕೋನ ದಿಂದ, "ಸರ್ವೇಜನಾ ಸುಕೀನಾ ಭವಂತು" ಎನ್ನುವ ವಿಶ್ವಮಾನವತ್ವದ ತಳಹದಿಯಲ್ಲಿ ಮಾನವ ಕಲ್ಯಾಣಕ್ಕಾಗಿ ಯತೇಚ್ಚವಾಗಿ ಕೊನೆಯಿಲ್ಲದಂತೆ ಬಳಸಬೇಕೆಂಬ ಆಶಯದೊಂದಿಗೆ "ಕೃತಕ ಬುದ್ಧಿಮತ್ತೆಯ ತಂತ್ರಜ್ಞಾನ ಮತ್ತು ಮಾನವ ಕಲ್ಯಾಣ" ಒಂದು ಸಾಪಲ್ಯ ಬಂದವನ್ನು ಹೊಂದಿವೆ ಎನ್ನುವುದನ್ನು ಖಾತ್ರಿಪಡಿಸುವ ಪ್ರಯತ್ನ ನಡೆದಿದೆ.

## ಕವಿ ಮನಸು

### ಕಲ್ಲಿನ ಹಂಪೆ

ಕಾಶಿಗೆ ಕಾಶಿ ದೊಡ್ಡ ಕಾಶಿ
ಊರೊಂದಿದೆ ಕಲ್ಲಿನ ಹಂಪೆ
ಮುಗಿಲಿಗೆ ಹೆಗಲು ಕೊಟ್ಟು ನಿಂತ
ವಾಸ್ತುಶಿಲ್ಪದ ತವರಿದೆ ಆಳೋ ದೊರೆಗೆ
ದುಡಿಯುವ
ಜನಕ್ಕೆ ಸ್ಪೂರ್ತಿ ತುಂಬುವ ಸೆಳೆಹುವುದು
ಕವನ ಕಟ್ಟೋ ಹಾಡು ಕವಿಗೆ
ಕವಿತೆ ಸಾಲು ಬರೆದಿದೆ

ಕಣ್ಣಿಗೆ ಕಟ್ಟಿದ ಹಂಪೆಯ ಚಿತ್ರ ಬಯಲೇ
ಆಲಯ ಆಗಿದೆ
ಸಂತ ಶರಣರ ಹೆಜ್ಜೆಯ ಚಿತ್ರ
ಬಾನಂಗಳದಲ್ಲಿ ಮಿನುಗುತಿದೆ ನೋಡಲೆಂದು
ಬರುವ ಜನಕೆ
ಮನಸ್ಸು ತೆರೆದು ಕರೆಯುತ್ತಿದೆ
ನಗೆಯ ತುಂಬಿ ಕಲ್ಲು ಬಂಡೆ
ಪಂಪನ ಮಹಿಮೆಯನ್ನು
ಗುನುಗುತಿದೆ

ಕಲ್ಲಗಂತ ಸೊಗಸಿದೆ
ಮಣ್ಣಾಗಂತ ಸೊಗಡಿದೆ
ಬದುಕು ಬವಣೆ ಜಾರಲೆಂದು
ಕನಸು ಗೋಡೆ ಕಟ್ಟಿದೆ
ಕಂಬದಲ್ಲಿ ಬಿಂಬ ಮೂಡಿ ಇತ್ತ
ಚಿತ್ತ ಸೆಳೆದಿದೆ
ಶಿಲೆಯ ಕಲ್ಲು ಒಳಗೆ ಸರಿದು
ಸೊರಗದಿರಲಿ ಎಂದಿದೆ

ನಿಂತ ಜಾಗದಲ್ಲಿ ನಿಂತು
ಕೊಂಡು
ನಮ್ಮಯ ಏಳ್ಗಿಯ ಬಯಸಿದರು
ಸ್ವಾರ್ಥ ತುಂಬಿ ಬಾಳಿದ ಮನುಜ
ನಿಮ್ಮಯ ಮುಂದೆ ಸಣ್ಣವನು
ಕಲ್ಲು ಮಣ್ಣಿನ ನೀತಿಗೆ ತೆಂಗು ಬಾಳೆಯ
ಪ್ರೀತಿಗೆ
ಸೂರ್ಯ ಚಂದ್ರರೇ ಅಭಯ ನೀಡಿ
ನಮ್ಮ ನಿಮ್ಮ ಕಾಯುವರು

– ಜಿ. ಯರಿಸ್ವಾಮಿ ಸಂಕ್ಲಾಪುರ

ಹಂಪಿ ಟೈಮ್ಸ್ SSLC ಮಾರ್ಗದರ್ಶಿ
ಇ-ಪೇಪರ್‌ನಲ್ಲೂ ಲಭ್ಯ
ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com

## ನಿತ್ಯ ಪಂಚಾಂಗ

ಮಾಸ: ಮಾಘ । ಸಂವತ್ಸರ: ಕ್ರೋಧಿ

**23–02–2025 – ಭಾನುವಾರ**

| | |
|---|---|
| ತಿಥಿ | : ದಶಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ಮೂಲ |
| ಯೋಗ | : ವಜ್ರ |
| ಕರಣ | : ಭವ |
| ಸೂರ್ಯೋದಯ | : 06:54:41 |
| ಸೂರ್ಯಾಸ್ತ | : 18:26:04 |
| ರಾಹು ಕಾಲ | : 15:59–18:26 |
| ಯಮಘಂಡ ಕಾಲ | : 12:41–14:07 |
| ಗುಳಿಕ ಕಾಲ | : 15:33–16:59 |



## ತುಂಗಭದ್ರಾ ನೀರಿನ ಮಟ್ಟ

ಶನಿವಾರ : 22–02–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1609.87 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 9104 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 37.314 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1587.55 ಅಡಿ |
| ಒಳ ಹರಿವು | 0 ಕ್ಯುಸೆಕ್ |
| ಹೊರ ಹರಿವು | 507 ಕ್ಯುಸೆಕ್ |
| ಸಾಮರ್ಥ್ಯ | 9.106 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಕನ್ನಡ ದಿನ ಪತ್ರಿಕೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಚಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

## ಶ್ರೀ ಗವಿಮಠಕ್ಕೆ ಮೇಘಾಲಯದ ರಾಜ್ಯಪಾಲರು ಭೇಟಿ



■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ಜಿಲ್ಲೆಯ ಸುಪ್ರಸಿದ್ಧ ಶ್ರೀ ಗವಿಸಿದ್ದೇಶ್ವರ ಮಠಕ್ಕೆ ಮೇಘಾಲಯ ರಾಜ್ಯದ ಗೌರವಾನ್ವಿತ ರಾಜ್ಯಪಾಲರಾದ ಚಂದ್ರಶೇಖರ ಹೆಚ್. ವಿಜಯಶಂಕರ ಅವರು ಶನಿವಾರ ಭೇಟಿ ನೀಡಿ, ಶ್ರೀ ಗವಿ ಮಠದ ಗದ್ದುಗೆಯ ದರ್ಶನ ಪಡೆದು, ಅಭಿನವ ಗವಿಶ್ರೀಗಳ ಆಶೀರ್ವಾದ ಪಡೆದು ನಂತರ ಪ್ರಸಾದವನ್ನು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ, ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ, ಮಾಜಿ ಸಂಸದ ಶಿವರಾಮೆಗೌಡ, ಮಾಜಿ ಶಾಸಕ ಬಸವರಾಜ ದಢೇಸೂಗೂರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ರಾಮ್ ಎಲ್ ಅರಸಿದ್ದಿ, ಅಪರ ಜಿಲ್ಲಾಧಿಕಾರಿ ಸಿದ್ರಾಮೇಶ್ವರ, ಉಪವಿಭಾಗಾಧಿಕಾರಿ ಕ್ಯಾಪ್ಟನ್ ಮಹೇಶ ಮಾಲಗಿತ್ತಿ, ಕೊಪ್ಪಳ ತಹಶೀಲ್ದಾರ ವಿಠ್ಠಲ್ ಚೌಗಲಾ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಜನಪ್ರತಿನಿಧಿಗಳು ಹಾಗೂ ಮತ್ತಿತರರು ಉಪಸ್ಥಿತರಿದ್ದರು.

## NOTICE OF CHANGE OF REGISTERED OFFICE

NOTICE IS HEREBY GIVEN that the Registered office of **SRIMAPRIME INDUSTRIAL CARE PRIVATE LIMITED** CIN:U74999TN2022PTC151105 has been shifted from: No:18, Ground Floor, Anna Street Kanagam, Tharamani, Chennai, Tamil Nadu, India-600113.

**TO: D.NO:296, Sri Sai Krupa, HP Gas Godown Road, New Amaravathi, Hospet, Karnataka - 583201.**

**Effective From: 31-Jan-2025**

All Communications and correspondence may be sent to the new address.

By order of the Board,
**NM PRASHANTH**
**DIRECTOR**

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಪುನರ್‌ಮನನ ಮಾಡಿ

HAMPI TIMES MARGADARSHI

ಪರೀಕ್ಷೆಗೆ ನಾವು ಸಿದ್ಧ 27 ದಿನ

ಮನಸ್ಸು ಮಾಡು-ಕರ್ತವ್ಯ ನಿಷ್ಟನಾಗು-ಕಾದು ನೋಡು

https://epaper.hampitimes.com

ನಿನ್ನ ಏಳಿಗೆಗೆ ನೀನೆ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC : ಸಮಾಜ ವಿಜ್ಞಾನ

### ಸಮಾಜವಿಜ್ಞಾನ ರಾಜ್ಯಶಾಸ್ತ್ರ ವಿಭಾಗ(ಮುಂದುವರೆದ ಭಾಗ) 3/4 ಅಂಕದ ಬಹು ನೀರಿಕ್ಷೀತ ಪ್ರಶ್ನೆಗಳು

**1)ಸಾರ್ವಜನಿಕ ಆಡಳಿತದ ಪ್ರಾಮುಖ್ಯತೆಯನ್ನು ವಿವರಿಸಿ.**

**ಉತ್ತರ:–** ಸರ್ಕಾರದ ಆಧಾರ ಸ್ತಂಭವಾಗಿದೆ.
* ಸಾರ್ವಜನಿಕ ಹಿತಾಶಕ್ತಿ ಕಾಪಾಡುತ್ತದೆ. * ಕಾನೂನು ಮತ್ತು ನೀತಿಗಳ ಅನುಷ್ಠಾನ. * ಶಾಸಕಾಂಗ & ಕಾರ್ಯಾಂಗಕ್ಕೆ ಸಹಾಯ ಮಾಡುತ್ತದೆ. * ಸಾಮಾಜಿಕ ಭದ್ರತೆ ನೀಡುತ್ತದೆ.
* ಸಾರ್ವಜನಿಕ ನೀತಿಗಳ ಅನುಷ್ಠಾನ.ಆಯವ್ಯಯ ಸಿದ್ಧಪಡಿಸುವಿಕೆ * ಆಯವ್ಯಯ ಸಿದ್ಧಪಡಿಸುವಿಕೆ * ಶಾಸಕಾಂಗ & ಕಾರ್ಯಾಂಗಕ್ಕೆ ಸಹಾಯ ಮಾಡುತ್ತದೆ. * ಸಾರ್ವಜನಿಕ ನೀತಿಗಳ ಅನುಷ್ಠಾನ.

**2) ಕೇಂದ್ರ ಲೋಕಸೇವಾ ಆಯೋಗದ ರಚನೆ ಯನ್ನು ವಿವರಿಸಿ.**

**ಉತ್ತರ:–** * ಸಂವಿಧಾನದ ವಿಧಿ 315ರ ಅಡಿಯಲ್ಲಿ ಸ್ಥಾಪಿತವಾಗಿದೆ. * ಆಯೋಗದಲ್ಲಿ ಒಬ್ಬರು ಅಧ್ಯಕ್ಷ ಮತ್ತು 10 ಜನ ಸದಸ್ಯರು ಇರುತ್ತಾರೆ. * ಸದಸ್ಯರನ್ನು ರಾಷ್ಟ್ರಾಧ್ಯಕ್ಷರು ನೇಮಕಮಾಡುತ್ತಾರೆ . *ಕೇಂದ್ರ ಕಛೇರಿ ನವದೆಹಲಿಯಲ್ಲಿದೆ *ಸದಸ್ಯರ ಅಧಿಕಾರಾವಧಿಯು 6 ವರ್ಷ * ರಾಷ್ಟ್ರಾಧ್ಯಕ್ಷರು ದುರ್ನಡತೆ ಆಧಾರದ ಮೇಲೆ ಸದಸ್ಯರನ್ನು ವಜಾ ಮಾಡಬಹುದು.
* ಆಯೋಗದಲ್ಲಿ ಕಾರ್ಯದರ್ಶಿಯವರು ಇರುತ್ತಾರೆ

**3) ಕೋಮುವಾದ ದೇಶದ ಐಕ್ಯತೆಗೆ ಮಾರಕ ಹೇಗೆ?**

**ಉತ್ತರ:–** 1.ಕೋಮುವಾದವು ಸಾಮಾಜಿಕವಾಗಿ ಭಿನ್ನತೆಗೆ ಕಾರಣವಾಗಿದೆ, 2.ಪರಸ್ಪರ ಅಪನಂಬಿಕೆಗೆ ಕಾರಣವಾಗಿದೆ. 3. ಭಯದ ವಾತಾವರಣವನ್ನು ಸೃಷ್ಟಿಸುತ್ತದೆ. 4. ಸಮಾಜದಲ್ಲಿ ಗುಂಪುಗಾರಿಕೆಯನ್ನು ಸೃಷ್ಟಿಸುತ್ತದೆ. 5.ಸಮಾಜದ ನೆಮ್ಮದಿಯನ್ನು ಕೆಡಿಸುತ್ತದೆ 6. ರಾಷ್ಟ್ರೀಯ ಏಕತೆ ಹಾಗೂ ಸಮಗ್ರತೆಯನ್ನು ಭಂಗಪಡಿಸುತ್ತದೆ. 7. ದೇಶದ ಏಕತೆಗೆ ಸಮಗ್ರತೆಗೆ ಧಕ್ಕೆಯಾಗುತ್ತದೆ. 8. ವ್ಯಕ್ತಿಗಳ ಜೀವ ಹಾಗೂ ಸೊತ್ತುಗಳ ನಾಶಕ್ಕೂ ಕಾರಣವಾಗುತ್ತದೆ. 9. ಗುಂಪುಗಳ ಮಧ್ಯೆ ಪರಸ್ಪರ ದೋಷಾರೋಪಣೆ, ದೈಹಿಕ ಹಲ್ಲೆಗಳಿಗೆ ಕಾರಣವಾಗುತ್ತದೆ.

**4) ಸಾಕ್ಷರತೆಯನ್ನು ವೃದ್ಧಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳಾವುವು ?**

**ಉತ್ತರ:–** * ಸಾಕ್ಷರ ಭಾರತ ಕಾರ್ಯಕ್ರಮವನ್ನು ರೂಪಿಸಲಾಗಿದೆ. * 1988 ರಲ್ಲಿ ರಾಷ್ಟ್ರೀಯ ಸಾಕ್ಷರತಾ ಮಿಷನ್ ಸ್ಥಾಪಿಸಲಾಗಿದೆ. * 2001 ರಲ್ಲಿ ಸರ್ವಶಿಕ್ಷಣ ಅಭಿಯಾನ ಕಾರ್ಯಕ್ರಮ ಜಾರಿಗೆ ತರಲಾಗಿದೆ. * 2009 ರಲ್ಲಿ ಶಿಕ್ಷನ ಹಕ್ಕು ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. * 6 ರಿಂದ 14 ವರ್ಷ ವಯೋಮಾನದವರೆಗೆ ಶಿಕ್ಷಣವನ್ನು ಕಡ್ಡಾಯಗೊಳಿಸಲಾಗಿದೆ. * ಮಹಿಳಾ ಶಿಕ್ಷಣ ಮತ್ತು ಜಾಗೃತಿಗೆ ಆದ್ಯತೆ ನೀಡಲಾಗಿದೆ. * ವಿಕಲಚೇತನರ ಶಿಕ್ಷಣಕ್ಕೆ ಆದ್ಯತೆ ನೀಡಲಾಗಿದೆ.

**5) ಮಹಿಳೆಯರ ಸ್ಥಾನಮಾನ ಉತ್ತಮ ಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?**

**ಉತ್ತರ:–** * ಮಹಿಳಾ ಆಯೋಗಗಳ ರಚನೆ ಮಾಡಲಾಗಿದೆ
* ಸ್ತ್ರೀ ಶಕ್ತಿ ಕಾರ್ಯಕ್ರಮ ಅನುಷ್ಠಾನ ಮಾಡಲಾಗಿದೆ. * ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ರಚನೆ ಮಾಡಲಾಗಿದೆ * ಸ್ಥಳೀಯ ಸಂಸ್ಥೆಗಳಲ್ಲಿ ಶೇಕಡಾ 33 ರಷ್ಟು ಮೀಸಲಾತಿ ನೀಡಲಾಗಿದೆ. * ಸರ್ಕಾರಿ ಉದ್ಯೋಗದಲ್ಲಿ ಶೇಕಡ 33 ರಷ್ಟು ಮೀಸಲಾತಿ ನೀಡಲಾಗಿದೆ. * ಬಾಲ್ಯವಿವಾಹ ನಿಷೇಧ ಕಾಯ್ದೆ ಅನುಷ್ಠಾನ ತರಲಾಗಿದೆ. * ವರದಕ್ಷಿಣೆ ನಿಷೇಧ ಕಾಯ್ದೆಯ ಅನುಷ್ಠಾನ ಮಾಡಲಾಗಿದೆ. * ಸ್ವಉದ್ಯೋಗಕ್ಕಾಗಿ ಸಾಲ ಮತ್ತು ಸಬ್ಸಿಡಿ ನೀಡಲಾಗಿದೆ.

**6.ಭಯೋತ್ಪಾದಕತೆಗೆ ಕಾರಣಗಳೇನು?**

**ಉತ್ತರ:–** * ಧಾರ್ಮಿಕ ಮೂಲಭೂತವಾದ.
* ಪ್ರತ್ಯೇಕತಾವಾದ. * ತೀವ್ರ ಎಡಪಂಥಿಯ ವಿಚಾರ. * ನಾಡ ಬಿಡುಗಡೆಯ ಛಲ. * ವರ್ಣದ್ವೇಷ ನೀತಿ * ಜನಾಂಗೀಯ ದ್ವೇಷ

**7. ಭಾರತದ ವಿದೇಶಾಂಗ ನೀತಿಯ ಮೂಲ ತತ್ವಗಳಾವುವು?**

**ಉತ್ತರ:–** * ವಸಾಹತುಶಾಹಿತ್ವಕ್ಕೆ ವಿರೋಧ.
* ಸಾಮ್ರಾಜ್ಯಶಾಹಿತ್ವಕ್ಕೆ ವಿರೋಧ * ವರ್ಣಭೇದ ನೀತಿಗೆ ವಿರೋಧ.
* ಅಲಿಪ್ತ ನೀತಿ. *ವಿಶ್ವಸಂಸ್ಥೆ ಮತ್ತು ವಿಶ್ವಶಾಂತಿಗೆ ಬೆಂಬಲ.
* ನಿಶಸ್ತ್ರೀಕರಣಕ್ಕೆ ಬೆಂಬಲ.
* ಆಫ್ರಿಕ ಮತ್ತು ಏಷ್ಯಾದ ಪ್ರಗತಿಗೆ ಪ್ರಥಮ ಆದ್ಯತೆ

**8. ವಿಶ್ವಸಂಸ್ಥೆಯ ಧ್ಯೆಯೋದ್ದೇಶಗಳು ಯಾವುವು?**

**ಉತ್ತರ:–** * ಅಂತರರಾಷ್ಟ್ರೀಯ ಶಾಂತಿ ಮತ್ತು ಸುಭದ್ರತೆಯನ್ನು ಕಾಪಾಡುವುದು. * ರಾಷ್ಟ್ರಗಳ ಮಧ್ಯೆ ಪರಸ್ಪರ ಮೈತ್ರಿಯನ್ನು ಬೆಳೆಸುವುದು. * ಮೂಲಭೂತ ಹಕ್ಕುಗಳ ಬಗೆಗೆ ನಂಬುಗೆಯನ್ನು ಹೆಚ್ಚಿಸುವುದು. * ಅಂತರಾಷ್ಟ್ರೀಯ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು. * ಅಂತರಾಷ್ಟ್ರೀಯ ಮಟ್ಟದ ನ್ಯಾಯ ಹಾಗೂ ಒಡಂಬಡಿಕೆಗಳಿಗೆ ಮನ್ನಣೆ ಒದಗಿಸುವುದು. * ರಾಷ್ಟ್ರಗಳ ಮಧ್ಯೆ ಪರಸ್ಪರ ಸೌಹಾರ್ದತೆಯ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು

**–: ನೆನಪಿನಲ್ಲಿಡಿ :–**

* ಸಾರ್ವಜನಿಕ ಆಡಳಿತದ ಪಿತಾಮಹ.– ವುಡ್ರೋವಿಲ್ಸನ್
* ಸಾರ್ವಜನಿಕ ಆಡಳಿತ ಮೊದಲ ಬಾರಿಗೆ ಬಳಸಿದವರು.– ಅಲೆಕ್ಸಾಂಡರ್ ಹ್ಯಾಮಿಲ್ಟನ್
* ಕೇಂದ್ರ/ರಾಜ್ಯ ಲೋಕಸೇವಾ ಆಯೋಗ ಸ್ಥಾಪನೆ–315ನೇ ವಿಧಿ
* ಲೋಕಾಯುಕ್ತ ಸಂಸ್ಥೆ ಸ್ಥಾಪನೆ ಉದ್ದೇಶ– ಭ್ರಷ್ಟಾಚಾರ ತಡೆಯಲು
* ಗ್ರಾಮೀಣ ಮಹಿಳೆಯರ ವಿಕಾಸಕ್ಕಾಗಿ ಜಾರಿಗೆ ತಂದ ಯೋಜನೆ– ಸ್ತ್ರೀ ಶಕ್ತಿ ಯೋಜನೆ
* ಭಾರತದ ವಿದೇಶಾಂಗ ನೀತಿಯ ಪಿತಾಮಹ –ಜವಾಹರಲಾಲ್ ನೆಹರು
* 'ತೃತೀಯ ಜಗತ್ತು' ಪದ ಮೊದಲ ಬಾರಿಗೆ ಬಳಸಿದವರು–. ಆಲ್ಫ್ರೆಡ್ ಸಾವಿ
* ವಿಶ್ವಸಂಸ್ಥೆಯ ಮುಖ್ಯ ಕಚೇರಿ – ನ್ಯೂಯಾರ್ಕ್ * ವಿಶ್ವಸಂಸ್ಥೆಯ ಸಚಿವ ಸಂಪುಟ – ಭದ್ರತಾ ಸಮಿತಿ * ವಿಶ್ವಸಂಸ್ಥೆಯ ಜಾಗತಿ ಸಂಸತ್ತು–ಸಾಮಾನ್ಯ ಸಭೆ
* ಅಂತರಾಷ್ಟ್ರೀಯ ನ್ಯಾಯಾಲಯ – ದಿ"ಹೇಗ್"

ಮಾರ್ಗದರ್ಶಿ ಶಿಕ್ಷಕರು : **ಕೊಟ್ರೇಶ್ ಮಾಳಿಗಿ** ಸಮಾಜ ವಿಜ್ಞಾನ ಶಿಕ್ಷಕರು, ಬ್ಯಾಸಿಗಿದೇರಿ, ಹ.ಬೊ.ಹಳ್ಳಿ (ತಾ) ವಿಜಯನಗರ (ಜಿಲ್ಲೆ) ಮೊ:9916567120

ಸಾಯಿಮಣಿ ಪ್ರಕಾಶನ, ಹೊಸಪೇಟೆ

## ದೇವಾಲಯ ದರ್ಶನ




ಹಂಪಿ ಶ್ರೀ ವಿರೂಪಾಕ್ಷೇಶ್ವರ ದರ್ಶನ

ನಿತ್ಯ ಅಭಿಷೇಕ ಸಮಯ
ಬೆಳಿಗ್ಗೆ: 6:30, 10:30 ಸಂಜೆ 6:30ಕ್ಕೆ

–: ದರ್ಶನ ಸಮಯ :–
ಬೆಳಿಗ್ಗೆ 6.30 ರಿಂದ ಮಧ್ಯಾಹ್ನ 1.15ರವರೆಗೆ
ಮಧ್ಯಾಹ್ನ 3 ರಿಂದ ರಾತ್ರಿ 7.30ರವರೆಗೆ

## ಆನಂದ ಬಾಣ




## ಮೈಕ್ರೋ ನ್ಯೂಸ್

### ವಿಶ್ವ ಪ್ರಸಿದ್ಧ ಹಂಪಿಗೆ ವಿದೇಶಿ ಹೂಡಿಕೆದಾರರು ಭೇಟಿ



■ ಹಂಪಿ ಟೈಮ್ಸ್ ಹೊಸಪೇಟೆ

ವಿಶ್ವ ಪರಂಪರೆ ಐತಿಹಾಸಿಕ ಹಂಪಿಗೆ KITE FAM TOUR–2025(Karnataka Heritage Discovery) ಕಾರ್ಯಕ್ರಮದ ಪ್ರಯುಕ್ತ ವಿದೇಶಿ ಹೂಡಿಕೆದಾರರು ಕರ್ನಾಟಕದ ಶ್ರೀಮಂತ ಕಲಾ ಸಂಸ್ಕೃತಿ ಪರಂಪರೆಯನ್ನು ಹೊಂದಿರುವ ಐತಿಹಾಸಿಕ ಸ್ಥಳಗಳಿಗೆ ಭೇಟಿಯನ್ನು ನೀಡುತ್ತಿದ್ದು, ಶನಿವಾರ ಹಂಪಿಯ ಪ್ರಸಿದ್ಧ ಸ್ಥಳಗಳಾದ ವಿಜಯ ವಿಠಲ ದೇವಸ್ಥಾನ, ಕಲ್ಲಿನ ರಥ, ಸಂಗೀತ ಮಂಟಪ, ಕಮಲ್ ಮಾಲ್, ಗಜ ಶಾಲೆ, ರಾಣಿ ಸ್ನಾನ ಗೃಹ ವೀಕ್ಷಿಸಿ ರೋಮಾಂಚನಗೊಂಡು, ಹಂಪಿಯ ಶ್ರೀಮಂತ ಕಲೆ ಮತ್ತು ಸಂಸ್ಕೃತಿಗೆ ಮನಸೋತು ಸಂಭ್ರಮಿಸಿದರು.

ಆಸ್ಟ್ರೇಲಿಯಾ, ರಷ್ಯಾ, ಅಮೆರಿಕ, ಮಲೇಶಿಯಾ, ಫಿಲಿಪಿನ್ಸ್, ಶ್ರೀಲಂಕಾ, ಬೆಲ್ಜಿಯಂ, ಇಟಲಿ, ಲಿಟೇಕ್ಯ, ದಕ್ಷಿಣಾ ಅಮೆರಿಕ, ಅರ್ಜೆಂಟಿನ ಈ ದೇಶಗಳ ಹೂಡಿಕೆದಾರರು ಹಂಪಿಯ ಜೊತೆಗೆ ಬಿಜಾಪುರ, ಬಾದಾಮಿ, ಪಟ್ಟದಕಲ್, ಐಹೊಳೆ, ಲಕ್ಕುಂಡಿ, ಮತ್ತೊಮ್ಮೆ ಹಂಪಿಯನ್ನು ಒಂದು ವಾರಗಳ ಕಾಲ ಈ ಸ್ಥಳಗಳ ವೀಕ್ಷಣೆಗೆ ಪ್ರವಾಸೋದ್ಯಮ ಇಲಾಖೆ ವತಿಯಿಂದ ಸಕಲವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಪ್ರಭುಲಿಂಗ ಎಸ್ ತಳ್ಕೇರಿ ವಿದೇಶಿ ಹೂಡಿಕೆದಾರರನ್ನು ಸ್ವಾಗತಿಸಿ, ಹಂಪಿ ಭೇಟಿಗೆ ವ್ಯವಸ್ಥೆಯನ್ನು ಮಾಡಿದರು, ಮಾರ್ಗದರ್ಶಿಗಳು ಹಂಪಿಯ ಇತಿಹಾಸವನ್ನು ಪರಿಚಯಿಸಿದರು, ಈ ಸಂದರ್ಭದಲ್ಲಿ ಗಣ್ಯರನ್ನು ಒಂದು ವಾರಗಳ ಕಾಲ ನೋಡಿಕೊಳ್ಳಲು ಶರತ್ ಮತ್ತು ಮಂಜುನಾಥ್ ಇದ್ದರು.

### ಬೈಪಾಸ್ ರಸ್ತೆಯಲ್ಲಿ ಭತ್ತದ ಲಾರಿ ಪಲ್ಟಿ, ಚಾಲಕನ ಪ್ರಾಣ ರಕ್ಷಿಸಿದ ಅಗ್ನಿಶಾಮಕರು




■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಹೊರವಲಯದ ಟನಲ್ ಸಮೀಪ ಹರಿಹರದಿಂದ ಹೈದರಾಬಾದ್‌ಗೆ ತೆರಳುತ್ತಿದ್ದ ಭತ್ತದ ಲಾರಿಯೊಂದು ಚಾಲಕನ ನಿಯಂತ್ರಣ ತಪ್ಪಿ ಕಂದಕಕ್ಕೆ ಉರುಳಿದ ದುರ್ಘಟನೆ ಶನಿವಾರ ಬೆಳಗಿನ ಜಾವ ನಡೆದಿದೆ.

ಬೆಳಿಗ್ಗೆ 4.45ಕ್ಕೆ ಅಗ್ನಿಶಾಮಕ ಠಾಣೆಗೆ ಕರೆಬಂದ ಹಿನ್ನೆಲೆ ತಕ್ಷಣವೇ ಘಟನಾ ಸ್ಥಳಕ್ಕೆ ತೆರಳಿ ಪಲ್ಟಿಯಾದ ಲಾರಿಯಲ್ಲಿ ಸಿಲುಕಿಕೊಂಡಿದ್ದ ಚಾಲಕನನ್ನು 30 ನಿಮಿಷಗಳ ಕಾರ್ಯಾಚರಣೆ ನಡೆಸಿ ಪ್ರಾಣಾಪಾಯದಿಂದ ರಕ್ಷಿಸಿ ಅಂಬ್ಯುಲೆನ್ಸ್ ಮೂಲಕ ಸರ್ಕಾರಿ ಆಸ್ಪತ್ರೆಗೆ ಸಾಗಿಸಿದ್ದಾರೆ. ಕ್ಲೀನರ್ ಸೇಫಾಗಿದ್ದಾನೆ. ಕಾರ್ಯಾಚರಣೆಯಲ್ಲಿ ಜಿಲ್ಲಾ ಅಗ್ನಿಶಾಮಕ ಅಧಿಕಾರಿ ವಾಲಿ ಪ್ರಮೋದ ಸುರೇಶ, ಪ್ರಮುಖ ಅಗ್ನಿಶಾಮಕ ಕೆ.ಮಹ್ಮದ್ ರಫೀಕ್, ಅಗ್ನಿಶಾಮಕರಾದ ನವೀನ್‌ಕಮಾರ, ಲಚಮನಾಯ್ಕ್, ಸಂತೋಷ, ಮಲ್ಲನಗೌಡ, ಚಾಲಕರಾದ ಹಣಮಂತ, ಎಸ್.ಎನ್.ಮೇಟಿಮಠ ಇದ್ದರು.

## ಗುಡೇಕೋಟೆ ಸುತ್ತಮುತ್ತಲಿನ ವಿಶೇಷಗಳತ್ತ ಒಮ್ಮೆ ಕಣ್ಣಾಯಿಸೋಣ

# ಪರಿಸರ ಪ್ರಿಯರ ಸ್ವರ್ಗ ಗುಡೇಕೋಟೆ

ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಹೋಬಳಿ ಕೇಂದ್ರಗಳಲ್ಲಿ ಒಂದಾದ ಗುಡೆಕೋಟೆಯು ಪ್ರಾಕೃತಿಕ ಸೌಂದರ್ಯ, ಐತಿಹಾಸಿಕ ಕುರುಹುಗಳೊಂದಿಗೆ ಹಲವು ವಿಶೇಷತೆಗಳನ್ನು ಹೊಂದಿದ್ದು, ಇಲ್ಲಿನ ರಹಸ್ಯ ದಾರಿಗಳು, ಸೇನಾ ತಾಣ, ಕೋಟೆಯೊಳಗಿನ ಪುರಾತನ ದೇವಾಲಯಗಳು ಪ್ರವಾಸಿಗರನ್ನು, ಸಂಶೋಧನಾಕಾರರನ್ನು, ಛಾಯಾಗ್ರಾಹಕರನ್ನು ಕೈಬೀಸಿ ಕರೆಯುತ್ತಿವೆ. ಗುಡೇಕೋಟೆ ಅರಣ್ಯ ಪರಿಸರ ಪ್ರಿಯರ ಸ್ವರ್ಗವಾಗಿದೆ. ಕರಡಿ, ಚಿರತೆ, ವಿವಿಧ ವಿಧಗಳ ಪಕ್ಷಿಗಳ ತಾಣವೂ ಆಗಿದೆ. ಗುಡೇಕೋಟೆ ಸುತ್ತಮುತ್ತಲಿನ ವಿಶೇಷಗಳತ್ತ ಕಣ್ಣಾಯಿಸಿ ಬರೋಣ...



### 1. ಆದಿಮಾನವನ ನೆಲೆ

ಗುಡೇಕೋಟೆ ಹೋಬಳಿ ವ್ಯಾಪ್ತಿಯ ಗುಡೇಕೋಟೆ, ಹಾಲಸಾಗರ, ಅಪ್ಪಯ್ಯನಹಳ್ಳಿ, ಸಿಡೆಗಲ್ಲು, ಕುಮತಿ,ಜರ್ಮಲಿ, ನರಸಿಂಹನಗಿರಿ,ಹುಲಿಕುಂಟೆ, ಮಡಕಲಕಟ್ಟೆ ಮೊದಲಾದವುಗಳು ಆದಿಮಾನವನ ನೆಲೆಗಳಾಗಿದ್ದವು. ಈ ಭಾಗಗಳಲ್ಲಿ ಆದಿ ಮಾನವರು ಬಳಸುತ್ತಿದ್ದ ಕೊಡಲಿ, ಬೀಸುವ ಕಲ್ಲು, ಚಕ್ಕೆಕಲ್ಲು ಉಪಕರಣಗಳ ಜೊತೆಗೆ ಶಂಕುವಿನ ಆಭರಣಗಳು ದೊರೆತಿದ್ದು ಆದಿಮಾನವನ ನೆಲೆಗೆ ಸಾಕ್ಷಿಯನ್ನೊದಗಿಸಿವೆ.

ಗುಡೇಕೋಟೆ,ಅಪ್ಪಯ್ಯನಹಳ್ಳಿ, ಚಕ್ಕೆಮಂಡಿಗಳ ಬೆಟ್ಟ ಸಾಲುಗಳಲ್ಲಿ ವಿದ್ವಾಂಸರು ಪ್ರಾಗೈತಿಹಾಸಿಕ ಕಾಲದ ವರ್ಣಚಿತ್ರಗಳನ್ನು ಶೋಧಿಸಿದ್ದಾರೆ. ಹುಲಿಕುಂಟೆ ಮತ್ತು ಕುಮತಿಯ ಮಾನವಾಕೃತಿಯ ಶಿಲೆಗಳು ಬೃಹತ್ ಶಿಲಾಯುಗ ಸಂಸ್ಕೃತಿಯನ್ನು ಹೋಲುತ್ತವೆ ಎಂದು ವಿದ್ವಾಂಸರು ಅಭಿಪ್ರಾಯಪಟ್ಟಿದ್ದಾರೆ. ಹುರುಳಿಹಾಳು, ನಡುವಲಹಳ್ಳಿ, ಹಾಲಸಾಗರ, ಗುಡೆಕೋಟೆ, ಅಪ್ಪಯ್ಯನಹಳ್ಳಿ ಜರಿಮಲೆ ಮುಂತಾದ ನೆಲೆಗಳಲ್ಲಿ ಹಾದಿಕೋಣೆ ಸಮಾಧಿಗಳನ್ನು ವಿದ್ವಾಂಸರು ಗುರುತಿಸಿದ್ದಾರೆ. ಗುಡೇಕೋಟೆ ಸಮೀಪದ ಚಕ್ಕೆಮಂಡಿಯಲ್ಲಿ ಬೃಹತ್ ಶಿಲಾಯುಗದ ಕುಟ್ಟುಚಿತ್ರಗಳನ್ನು ಸಂಶೋಧಿಸಲಾಗಿದೆ. ಹಾಲಸಾಗರ ಸಮೀಪದ ಬೆಟ್ಟದಲ್ಲಿ ಗೀರು ಚಿತ್ರಗಳನ್ನು ಸಂಶೋಧಿಸಲಾಗಿದೆ. ಈ ಎಲ್ಲಾ ಸಾಕ್ಷಾಧಾರಗಳಿಂದ ಸದರಿ ಹೋಬಳಿ ವ್ಯಾಪ್ತಿಯು ಆದಿಮಾನವ ನೆಲೆಯಾಗಿತ್ತು ಎಂಬುದನ್ನು ಸಾಬೀತುಪಡಿಸಿದೆ.

### 2. ಎರಡು ಪಾಳೇಗಾರ ಮನೆತನಗಳು

ಗುಡೇಕೋಟೆ ಪಾಳೇಗಾರರು: ಗುಡೇಕೋಟೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಗುಡೆಕೋಟೆ ಪಾಳೇಗಾರರು ಆಳ್ವಿಕೆ ಮಾಡಿದ್ದಾರೆ. ಇವರ ಕಾಲದ ಕೋಟೆ,ದೇವಾಲಯ, ಕೆರೆ, ಬಾವಿ, ಶಾಸನ ಮುಂತಾದ ಐತಿಹಾಸಿಕ ಸ್ಮಾರಕಗಳನ್ನು ರಾಜಧಾನಿ ಕೇಂದ್ರದಲ್ಲಿ ಕಾಣಬಹುದು.

ಬೊಮ್ಮಂತರಾಜ, ಚಿನ್ನಯರಾಜ, ಇಮ್ಮಡಿರಾಜಪ್ಪ ನಾಯಕ, ಜಟಂಗಿರಾಜರು, ರಾಮಪ್ಪನಾಯಕ, ಶಿವಪ್ಪನಾಯಕ ಇವರುಗಳು ಗುಡೇಕೋಟೆಯನ್ನು ಆಳಿದ ಪ್ರಮುಖರು.

ಪಾಳೇಗಾರರ ಆಳ್ವಿಕೆಯ ನಂತರ ಗುಡೇಕೋಟೆಯು ಸಾ.ಶ.18 ನೆಯ ಶತಮಾನದ ಕೊನೆಯಾರ್ಧದಲ್ಲಿ ಹೈದರಾಲಿ ಮತ್ತು ಟಿಪ್ಪುವಿನ ವಶದಲ್ಲಿತ್ತು. ಸಾ. ಶ. 1792 ರಲ್ಲಿ ಬ್ರಿಟಿಷರಿಂದ ಟಿಪ್ಪು ಪರಾಜಯಗೊಂಡಿದ್ದರಿಂದ ಗುಡೇಕೋಟೆ ಪಾಳೇಗಾರರಿಗೆ ಪುನಃ ಸೇರಿತು.ಸಾ.ಶ. 1799 ರಲ್ಲಿ ಟಿಪ್ಪುವಿನ ಮೇಲೆ ಬ್ರಿಟಿಷರು ಆಕ್ರಮಣ ಮಾಡಿ ಗುಡೇಕೋಟೆಯನ್ನು ವಶಪಡಿಸಿಕೊಂಡರು. ಆಗ ಒಪ್ಪಂದದಂತೆ ಗುಡೆಕೋಟೆ ಹೈದರಾಬಾದಿನ ನಿಜಾಮನಿಗೆ ಸೇರಿತು.ಸಾ.ಶ.1800 ರಲ್ಲಿ ಸಹಾಯಕ ಸೈನ್ಯ ಪದ್ಧತಿಗೆ ಒಳಪಟ್ಟು ನಿಜಾಮ ಬ್ರಿಟಿಷರಿಗೆ ಒಪ್ಪಿಸಿದನು. ಬ್ರಿಟಿಷರ 150 ವರ್ಷಗಳ ಆಳ್ವಿಕೆಯ ನಂತರ 1947ರಲ್ಲಿ ದೇಶಕ್ಕೆ ಸ್ವಾತಂತ್ರ್ಯ ಬಂದಾದ ಮೇಲೆ ಗುಡೆಕೋಟೆ ಮೈಸೂರು ರಾಜ್ಯಕ್ಕೆ ಸೇರಿತು.



ಶೇಖರಯ್ಯ ಟಿ ಎಚ್ ಎಂ
ಶಿಕ್ಷಕರು, ಕೂಡ್ಲಿಗಿ

Scan For Digital Colourful
HAMPI TIMES E-paper

**ಜರಿಮಲೆ ಪಾಳೇಗಾರರು:** ಜರಿಮಲೆ ಪಾಳೇಗಾರರು ಕೂಡ್ಲಿಗಿ ತಾಲೂಕಿನ ಜರಿಮಲೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ಮಾಡಿದ್ದಾರೆ. ಇವರ ಮೂಲಪುರುಷ ಪಾಪಣ್ಣನಾಯಕ (ಪಾಪನಾಯಕ) ವಿಜಯನಗರದ ಸಾಳುವ ವೀರನರಸಿಂಹನ (1419 ರಿಂದ 1505) ಸೇವಕನಾಗಿದ್ದನಂತೆ. ತನ್ನ ಸೇವೆ, ನಿಷ್ಠೆಗಳಿಂದ ಅರಸನಿಗೆ ಒಪ್ಪಿತನಾಗಿದ್ದ ಈತ ಕಾಂಚಿಪುರಂಗೆ ದೊರೆ ಹೋದಾಗ ಆತನೊಡನಿದ್ದು ವಿಶ್ವಾಸಕ್ಕೆ ಪಾತ್ರನಾದ. ಮೆಕೆಂಜಿಯ ದಾಖಲೆಗಳಲ್ಲಿ ಪಾಪಣ್ಣನಾಯಕನೆಂದು ಇತರೆ ಆಕರಗಳಲ್ಲಿ ಪೆನ್ನಪ್ಪ ನಾಯಕನೆಂದು ಇವರ ಮೂಲ ವಂಶಿಕರನ್ನು ಹೆಸರಿಸಲಾಗಿದೆ. ಇವರು ಆಂಧ್ರದ ಕದ್ರಿಯಿಂದ ವಲಸೆ ಬಂದವರು.

ಇಮ್ಮಡಿನಾಯಕನು ಸ್ವತಂತ್ರವಾಗಿ ಜರಿಮಲೆಯಲ್ಲಿ ಕೋಟೆ, ಅರಮನೆ ಕಟ್ಟಿಸಿ, ಪ್ರಜೆಗಳಿಗೆ ವಾಸಿಸಲು ಮನೆ, ಕೆರೆ ಕಟ್ಟೆ ಬಾವಿಗಳನ್ನು ತೋಡಿಸಿದನು. ಸದರಿ ಸಂಸ್ಥಾನವನ್ನು ಕಿರಿಇಮ್ಮಡಿ ನಾಯಕ,ಬೊಮ್ಮಣ್ಣನಾಯಕ,ಇಮ್ಮಡಿನ ಾಯಕ ಈತನ ಮಕ್ಕಳಾದ ಬೊಮ್ಮಣ್ಣನಾಯಕ ಮತ್ತು ಮಲ್ಲಿಕಾರ್ಜುನ ನಾಯಕರು ಆಳಿದರೆಂದು ಜರಿಮಲೆ ವಂಶಾವಳಿಯಿಂದ ತಿಳಿದುಬರುತ್ತದೆ. ಒಟ್ಟಿನಲ್ಲಿ ಸುಮಾರು ಸಾ.ಶ.1500 ರಿಂದ ಸಾ.ಶ.1800 ರವರೆಗೆ ಈ ಪಾಳೇಗಾರರು ಅಸ್ತಿತ್ವದಲ್ಲಿದ್ದರೆಂದು ತಿಳಿದು ಬರುತ್ತದೆ.

(ಮಾಹಿತಿಯ ಮೂಲ: ಡಾ. ಆರ್. ಮಂಜನಾಯ್ಕ....ಇವರ 'ವಿಜಯನಗರ ಜಿಲ್ಲೆಯ ಪುರಾತತ್ವ' ಕೃತಿ)

### 3. ವೀರವನಿತೆ ಒನಕೆ ಓಬವ್ವಳ ತವರು

ಚಿತ್ರದುರ್ಗದ ಕೋಟೆಯ ವಶಕ್ಕೆ ಯತ್ನಿಸಿದ ಹೈದರಾಲಿಯ ಕುತಂತ್ರವನ್ನು ವಿಫಲಗೊಳಿಸಿ ಕೋಟೆ ಮತ್ತು ಜನತೆಯನ್ನು ಅಪಾಯದಿಂದ ಪಾರು ಮಾಡಿ ರಾಜನಿಷ್ಠೆ, ರಾಯನಿಷ್ಠೆ ಮತ್ತು ಸಮಯಪ್ರಜ್ಞೆ ಮೆರೆದ ವೀರವನಿತೆ ಓಬವ್ವ ಕರುನಾಡಿಗೆ ಪ್ರಖ್ಯಾತಳಾಗಿದ್ದಾಳೆ. ಇಂತಹ ವೀರವನಿತೆಯ ತವರೂರು ನಮ್ಮ ಗುಡೇಕೋಟೆ ಎಂಬುದು ಹೆಗ್ಗಳಿಕೆ.

### 4. ಕೋಟೆ–ಕೊತ್ತಲಗಳು

ಜರ್ಮಲಿ ಮತ್ತು ಗುಡೇಕೋಟೆಗಳಲ್ಲಿ ಬೃಹತ್ ಗಾತ್ರದ ಬಂಡೆಗಳನ್ನು ಬಳಸಿ ರಾಜ್ಯದ ರಕ್ಷಣೆಗಾಗಿ ಕೋಟೆಗಳನ್ನು ಕಟ್ಟಲಾಗಿದೆ. ಗುಡೆಕೋಟೆಯ ಕೋಟೆಯನ್ನು ಕುರಿತು ಪ್ರಾಕ್ತನ ಶಾಸ್ತ್ರಜ್ಞ ಬ್ರೂಸ್ ಫೂಟ್ "ಇಷ್ಟು ಬೃಹತ್ ಗಾತ್ರದ ಬಂಡೆಗಳನ್ನು ಬಳಸಿ ಕಟ್ಟಿದ ಕೋಟೆಗೋಡೆಗಳನ್ನು ಇಡೀ ದಕ್ಷಿಣ ಭಾರತದಲ್ಲಿ ಕಂಡಿಲ್ಲ" ಎಂದು ಹೇಳಿದ್ದಾರೆ.

### 5. ಕರಡಿಧಾಮ

ರಾಜ್ಯದಲ್ಲಿ ಎರಡನೇ ಕರಡಿ ಧಾಮವಾಗಿ ಅಸ್ತಿತ್ವಕ್ಕೆ ಬಂದಿರುವ ತಾಲೂಕಿನ ಗುಡೇಕೋಟೆಕರಡಿಧಾಮ ಈಗ ಪ್ರವಾಸಿತಾಣವಾಗಿ ರೂಪುಗೊಳ್ಳುತ್ತಿದೆ.16000 ಕ್ಕೂ ಹೆಚ್ಚು ಹೆಕ್ಟೇರ್ ಪ್ರದೇಶದಲ್ಲಿರುವ ಕರಡಿಧಾಮದಲ್ಲಿ ನಿಸರ್ಗ ನಿರ್ಮಿತ ಅಪರೂಪದ ಮತ್ತು ಆಕರ್ಷಕ ಜೋಡಿಕಲ್ಲುಗಳು, ಹಾವಿನ ಹೆಡೆಯಂತ ಕಲ್ಲುಗಳು, ನೀರಾನೆಬಾಯಿ ತೆರೆದಂತೆ ಮತ್ತು ಎತ್ತು ವಿರಮಿಸುವಂತೆ, ಟೈಟಾನಿಕ್ ಹಡಗಿನಂತೆ, ಗದೆಯಂತೆ..... ಹೀಗೆ ಬೇರೆ ಬೇರೆ ರೀತಿಯ ಪ್ರಕೃತಿ ನಿರ್ಮಿತ ಸೋಜಿಗಗಳು ಕಲ್ಲುಗಳಲ್ಲಿ ಮೂಡಿವೆ.

ಈ ಕರಡಿ ಧಾಮಕ್ಕೆ ಚಿತ್ರನಟ ದಿವಂಗತ ಪುನೀತ್ ರಾಜಕುಮಾರ್ ಭೇಟಿ ನೀಡಿದ್ದರು. ಇವರ 'ಗಂಧದಗುಡಿ' ಚಿತ್ರದಲ್ಲಿಯೂ ಈ ಪ್ರದೇಶದ ವೈಶಿಷ್ಟ್ಯಗಳು ಸೆರೆಯಾಗುವ ಮೂಲಕ ಗುಡೇಕೋಟೆಯ ಕೀರ್ತಿಯನ್ನು ನಾಡಿನಾದ್ಯಂತ ಹಬ್ಬಿಸಿದೆ.

### 6. ಶಿವನ ತೊಡೆಯ ಮೇಲೆ ಪಾರ್ವತಿ ಕುಳಿತಿರುವ ಅಪರೂಪದ ದೇವಾಲಯ

ಗುಡೇಕೋಟೆ ಗ್ರಾಮದಿಂದ ಕೆರೆಗೆ ಹೋಗುವ ರಸ್ತೆಯಲ್ಲಿ ಊರ ಪಕ್ಕದಲ್ಲಿರುವ ದೇವಸ್ಥಾನದಲ್ಲಿ ಕಾಣಿಸಿಗುವುದೇ ಅಪರೂಪದ ಈ ಶಿಲ್ಪ ಇರುವ ದೇವಾಲಯ. ಈ ಶಿಲ್ಪವು ಲಿಂಗಸಮಾನತೆಯ ಸಂಕೇತವನ್ನು ಸೂಚಿಸುವಂತಿದೆ. ಇದು ವಿಜಯನಗರೋತ್ತರ ಅಥವಾ ಪಾಳೇಗಾರರ ಕಾಲದಲ್ಲಿ ನಿರ್ಮಾಣವಾಗಿದೆ ಎಂದು ಸಂಶೋಧಕರು ಅಭಿಪ್ರಾಯಪಟ್ಟಿದ್ದಾರೆ.

### 7. ಸಸ್ಯಸಂಪತ್ತು ಮತ್ತು ಪ್ರಾಣಿಸಂಪತ್ತು

ಹೋಬಳಿ ವ್ಯಾಪ್ತಿಯಲ್ಲಿ ಹಲವು ಕಾಯ್ದಿಟ್ಟ ಅರಣ್ಯ ಪ್ರದೇಶಗಳಿದ್ದು ಈ ಅರಣ್ಯಗಳಲ್ಲಿ ತುಗ್ಗಲಿ, ತರೇದ್, ನೀಲಗಿರಿ, ನೇರಳೆ, ನೀಲಿಗಿಡ, ಉಲಿಗಿಲಿ, ಆಲ ಬೇವು, ಹುಣಸೆ ಮೊದಲಾದ ಮರಗಳು... ಬಂದರಿಕೆ, ಲಂಟಾನ ಮೊದಲಾದ ಪೊದೆ ಜಾತಿಯ ಸಸ್ಯಗಳು... ಸೇರಿ ಹಲವು ಔಷಧಿ ಸಸ್ಯಗಳಿವೆ. ಇಲ್ಲಿನ ಅರಣ್ಯಗಳಲ್ಲಿ ಕರಡಿ,ಕಾಡುಹಂದಿ,ಮುಳ್ಳುಹಂದಿ, ಮೊಲ, ಅಡವಿಬೆಕ್ಕು, ಕೋತಿ,ನರಿ, ತೋಳ, ಕಪಲಾಟನರಿ ಮೊದಲಾದ ಪ್ರಾಣಿಗಳಿವೆ. ಗುಬ್ಬಿ, ಕಾಗೆ,ಪಾರಿವಾಳ, ಕೋಗಿಲೆ, ನವಿಲು,ಗುಡ್ಡುಪುರಲೆ ಮೊದಲಾದ ಪಕ್ಷಿಗಳಿವೆ.

### 8. ತಾಲೂಕಿನ ದೊಡ್ಡ ಕೆರೆ

ಹೋಬಳಿ ವ್ಯಾಪ್ತಿಯ ಗಂಡಬೊಮ್ಮನಹಳ್ಳಿ ಕೆರೆಯು ತಾಲೂಕಿನಲ್ಲಿಯೇ ಅತಿ ದೊಡ್ಡ ಕೆರೆಯಾಗಿದೆ.ಇದಲ್ಲದೆ ರಾಮದುರ್ಗ ಕೆರೆ, ಗುಡೇಕೋಟೆ ಕೆರೆ, ಗೆದ್ದಲಗಟ್ಟೆಯ ನಿಂಗನಹಳ್ಳಿ ಕೆರೆ, ಹುಲಿಕುಂಟೆ ಕೆರೆ... ಸೇರಿದಂತೆ ಹಲವು ಕೆರೆಗಳು ಹೋಬಳಿ ವ್ಯಾಪ್ತಿಯಲ್ಲಿವೆ.

### 9. ಅತಿ ಹೆಚ್ಚು ಬಾವಿಗಳಿದ್ದ ಹೋಬಳಿ

ಒಂದು ಕಾಲದಲ್ಲಿ ಹೋಬಳಿಯ ವ್ಯಾಪ್ತಿಯಲ್ಲಿ ಅತಿ ಹೆಚ್ಚು ಬಾವಿಗಳು ಇದ್ದವು. ಬಾವಿ ನೀರಾವರಿಯು ಹೆಚ್ಚು ಬಳಕೆಯಲ್ಲಿತ್ತು. ಇತ್ತೀಚಿಗೆ ಮಳೆ ಪ್ರಮಾಣ ಕಡಿಮೆಯಾಗಿದ್ದರಿಂದ ಹಲವು ಬಾವಿಗಳು ಬತ್ತಿ ಹೋಗಿದ್ದವು. ಆದರೆ ಈ ವರ್ಷ ಸುರಿದ ಭಾರಿ ಮಳೆಗೆ ಮತ್ತೆ ಬಾವಿಗಳಲ್ಲಿ ನೀರು ಕಾಣಿಸಿಕೊಂಡಿದೆ.



### 10. ಪ್ರಮುಖ ಬೆಳೆಗಳು

ಇಲ್ಲಿನ ಪ್ರಮುಖ ವಾಣಿಜ್ಯ ಬೆಳೆ ಎಂದರೆ ಶೇಂಗಾ. ಇದಲ್ಲದೆ ಆಹಾರ ಬೆಳೆಗಳಾದ ಜೋಳ, ಸಜ್ಜೆ, ನವಣೆ,ರಾಗಿ, ಮೆಕ್ಕೆಜೋಳ, ಹುರುಳಿ,ತೊಗರಿ ಮೊದಲಾದವುಗಳನ್ನು ಹೆಚ್ಚಾಗಿ ಬೆಳೆಯುತ್ತಾರೆ. ಅಲ್ಲಲ್ಲಿ ತೋಟಗಾರಿಕೆ ಬೆಳೆಗಳಾದ ಅಡಿಕೆ,ತೆಂಗು,ಬಾಳೆ,ಎಲೆಬಳ್ಳಿ...ಇತ್ಯಾದಿಗಳನ್ನು ನೀರಾವರಿ ಜಮೀನುಗಳಲ್ಲಿ ಬೆಳೆಯುತ್ತಾರೆ.

### 11. ಪಶುಪಾಲನೆ

ಹೋಬಳಿ ವ್ಯಾಪ್ತಿಯಲ್ಲಿ ಹಲವು ಬುಡಕಟ್ಟು ಜನಾಂಗಗಳಿದ್ದು ಇವರ ಮುಖ್ಯ ಉಪ ಕಸುಬು ಪಶುಪಾಲನೆಯಾಗಿದೆ. ದನಕರುಗಳು, ಕುರಿ, ಮೇಕೆ ಸಾಕುವ ಮೂಲಕ ಜೀವನವನ್ನು ರೂಪಿಸಿಕೊಂಡಿದ್ದಾರೆ.

### 12. ಚಿಕ್ಕಜೋಗಿಹಳ್ಳಿ ಎಂಬ ಮಾದರಿ ಗ್ರಾಮ

ಹೋಬಳಿ ವ್ಯಾಪ್ತಿಯ ಚಿಕ್ಕ ಜೋಗಿಹಳ್ಳಿ ಒಂದು ಕಾಲದಲ್ಲಿ ದೇಶದಲ್ಲಿಯೇ ಮಾದರಿ ಗ್ರಾಮವೆನಿಸಿತ್ತು. ಚಿಕ್ಕಜೋಗಿಹಳ್ಳಿ ಮೊದಲು ಚಿಕ್ಕದಾದ ಹಳ್ಳಿಯಾಗಿದ್ದು, ಅಲ್ಲಿಯೇ ಹುಟ್ಟಿ ಬೆಳೆದಿದ್ದ ದಿವಂಗತ ಕೆ.ವೆಂಕಟಸ್ವಾಮಿಯವರ ದೂರದರ್ಶಿತ್ವ, ಸ್ಥಳೀಯ ಜನತೆಯ ಸಹಕಾರ, ಸರ್ಕಾರದ ನೆರವಿನೊಂದಿಗೆ ಮಾದರಿ ಗ್ರಾಮವಾಗಿ ರೂಪುಗೊಂಡಿತು. ರೇಷ್ಮೆ ಸಂಕೀರ್ಣ, ಅಂಚೆ ಕಛೇರಿ,ಆಸ್ಪತ್ರೆ, ಪಶು ವೈದ್ಯ ಆಸ್ಪತ್ರೆ, ಶಾಲೆ,ಚಿತ್ರಮಂದಿರ, ಕೋಳಿ ಸಾಕಾಣಿಕೆ ಕೇಂದ್ರ, ಕಂಬಳಿ ನೇಯ್ಗೆ ಕೇಂದ್ರ,ಬ್ಯಾಂಕ್ ಹೀಗೆ ಹತ್ತು ಹಲವು ವೈಶಿಷ್ಟ್ಯಗಳೊಂದಿಗೆ ಕೂಡಿರುವ ಗ್ರಾಮ ಇದಾಗಿದೆ. ಭಾರತದ ಉಕ್ಕಿನ ಮಹಿಳೆ ದಿವಂಗತ ಇಂದಿರಾಗಾಂಧಿ ಸೇರಿದಂತೆ ಹಲವು ಗಣ್ಯರು ಈ ಗ್ರಾಮಕ್ಕೆ ಭೇಟಿ ನೀಡಿದ್ದಾರೆ.

### 13. ಜವಾಹರ್ ನವೋದಯ ವಿದ್ಯಾಲಯ

ಹೋಬಳಿ ವ್ಯಾಪ್ತಿಯ ಚಿಕ್ಕಜೋಗಿಹಳ್ಳಿಯಲ್ಲಿ ಜವಾಹರ್ ನವೋದಯ ವಿದ್ಯಾಲಯವಿದೆ. ಇಲ್ಲಿ ಓದಿರುವ ಅನೇಕರು ಉನ್ನತ ಹುದ್ದೆಗಳಲ್ಲಿದ್ದಾರೆ.

### 14. ಸಾಹಿತಿಗಳು

ಹೋಬಳಿ ವ್ಯಾಪ್ತಿಯ ಅಯ್ಯನಹಳ್ಳಿ ಗ್ರಾಮದ ಡಾ. ಎಸ್ ಎಂ ವೃಷಭೇಂದ್ರ ಸ್ವಾಮಿ ಇವರು ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಕನ್ನಡ ಅಧ್ಯಯನ ಪೀಠದ ಮುಖ್ಯಸ್ಥರಾಗಿದ್ದರು. ಹಲವು ಅಮೂಲ್ಯ ಕೃತಿಗಳನ್ನು ರಚಿಸಿದ್ದಾರೆ. ಇದೇ ಗ್ರಾಮದ ವಿದ್ವಾನ್ ಎಸ್ ಎಂ ಚಂದ್ರಶೇಖರಯ್ಯನವರು ಹಲವ ಕೃತಿಗಳನ್ನು ಬರೆದಿದ್ದು, 'ಪ್ರವಚನ ಕಂಠೀರವ' ಎಂದೇ ಹೆಸರಾಗಿದ್ದರು. ಸಿಡೆಗಲ್ಲುಗ್ರಾಮದ ಈಶ್ವರ್ ಶಿಡೆಗಲ್ಲು ಇವರು ಉತ್ತಮ ಅಂಕಣಕಾರರಾಗಿದ್ದಾರೆ. ಶ್ರೀ ಎನ್ ಎಂ ರವಿಕುಮಾರ್ ಇವರು ಹಲವು ನಾಟಕಗಳನ್ನು ಮತ್ತು 'ಕೂಡ್ಲಿಗಿ ತಾಲೂಕು ದರ್ಶನ' ಸೇರಿದಂತೆ ಹಲವು ಮೌಲಿಕ ಕೃತಿಗಳನ್ನು ರಚಿಸಿದ್ದಾರೆ. ಇತ್ತೀಚಿಗೆ ಶ್ರೀ ಶೇಖರಯ್ಯ ಟಿ ಎಚ್ ಎಂ., ಶ್ರೀ ವೀರೇಶಪ್ಪ ಮಾಡ್ಲಾಕನಹಳ್ಳಿ, ಶ್ರೀ ಮನೋಹರ ಹುಲಿಕುಂಟೆ ಹಾಗೂ ಶ್ರೀ ರಾಜಶೇಖರಗೌಡ ಮೊದಲಾದವರು ಸಾಹಿತ್ಯ ಕೃಷಿಯಲ್ಲಿ ತೊಡಗಿಕೊಂಡಿದ್ದಾರೆ.

### 15. ಮೂವರು ಶಾಸಕರನ್ನು ನಾಡಿಗೆ ನೀಡಿದ ಹೋಬಳಿ

ಈ ಹಿಂದೆ ಕೂಡ್ಲಿಗಿ ಕ್ಷೇತ್ರದ ಶಾಸಕರಾಗಿದ್ದ ದಿವಂಗತ ಎನ್ ಟಿ ಬೊಮ್ಮಣ್ಣನವರು ಇದೇ ಹೋಬಳಿ ವ್ಯಾಪ್ತಿಯ ನರಸಿಂಹನಗಿರಿಯವರು. ಹಾಗೆಯೇ ಕೊಟ್ಟೂರು ಕ್ಷೇತ್ರದ ಶಾಸಕರಾಗಿದ್ದ ಕೆ. ರವೀಂದ್ರನಾಥ ಬಾಬು ಇವರು ಚಿಕ್ಕಜೋಗಿಹಳ್ಳಿಯವರು. ಹಾಲಿ ಕೂಡ್ಲಿಗಿ ಕ್ಷೇತ್ರದ ಶಾಸಕರಾಗಿರುವ ಡಾಕ್ಟರ್ ಶ್ರೀನಿವಾಸ್ ಎನ್ ಟಿ ಇವರು ಹೋಬಳಿಯ ನರಸಿಂಹನಗಿರಿಯವರು. ಹೀಗೆ ಮೂವರು ಶಾಸಕರನ್ನು ನೀಡಿದ ಹೆಗ್ಗಳಿಕೆ ಈ ಹೋಬಳಿಯದ್ದು.

### 16. ಸರ್ವೋದಯ ಗ್ರಾಮ ಮಾದರಿ ಶಾಲೆ

ಆಚಾರ್ಯ ವಿನೋಬಾ ಭಾವೆಯವರಿಂದ ಪ್ರಭಾವಿತರಾಗಿ, ಅವರ ಶಿಷ್ಯರಲ್ಲಿ ಒಬ್ಬರಾಗಿದ್ದ ಶ್ರೀಮಾನ್ ಮಟ್ಟು ವಾಸುದೇವಾಚಾರ್ಯರು ಸ್ಥಾಪಿಸಿದ್ದ ಸರ್ವೋದಯ ಪರಿಕಲ್ಪನೆಯನ್ನು ಒಳಗೊಂಡ ಸರ್ವೋದಯ ಗ್ರಾಮ ವಸತಿ ಶಾಲೆ, ಗುಡೇಕೋಟೆ ಸಮೀಪದ ಸರ್ವೋದಯ ಗ್ರಾಮದಲ್ಲಿದೆ.

### 17. ಐತಿಹಾಸಿಕ ದೇವಸ್ಥಾನಗಳು

ಮಾಕನಡುಕು ಗ್ರಾಮದ ಕಂಚೋಬಳ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ, ಜರ್ಮಲಿಯ ಶ್ರೀ ಬಾಗೇಶ್ವರ ದೇವಸ್ಥಾನ, ದುರ್ಗಾಂಬಿಕಾ ದೇವಾಲಯ, ಗುಡೇಕೋಟೆಯ ಶ್ರೀ ಪಂಚಲಿಂಗೇಶ್ವರ, ಶ್ರೀರಾಮಲಿಂಗೇಶ್ವರ, ಶ್ರೀ ಆಂಜನೇಯ ದೇವಸ್ಥಾನ, ಹುರುಳಿಹಾಳಿನ ವೀರಭದ್ರ ದೇವಾಲಯ, ಕುಮತಿಯ ಸಿದ್ದಲಿಂಗೇಶ್ವರ ದೇವಾಲಯ, ಹಾಲಸಾಗರದ ಮಲ್ಲೇಶ್ವರ ದೇವಾಲಯ.... ಸೇರಿದಂತೆ ಹಲವು ಐತಿಹಾಸಿಕ ಮತ್ತು ಪ್ರಾಚೀನ ದೇವಾಲಯಗಳು ಹೋಬಳಿ ವ್ಯಾಪ್ತಿಯಲ್ಲಿವೆ.

ಕೊನೆಯ ಮಾತು: ಆದಿಮಾನವನ ನೆಲೆಯಾಗಿದ್ದ ಗುಡೇಕೋಟೆ ಹೋಬಳಿ ವ್ಯಾಪ್ತಿಯು ಹಲವಾರು ವೈಶಿಷ್ಟ್ಯಗಳ ಮೂಲಕ ನಾಡಿನಾದ್ಯಂತ ತನ್ನ ಹೆಸರನ್ನು ಪಸರಿಸಿ ಕೊಂಡಿದೆ.